ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 3 | ಸಂಚಿಕೆ 2 | ಜನವರಿ 11, 1981 | ಬೆಲೆ : 50 ಪೈಸೆ

ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ

ಬೆಂಗಳೂರು ಆಧಾರಿತ ಕೇಂದ್ರ ಸರಕಾರದ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳ ಸುಮಾರು 1 ಲಕ್ಷ 25 ಸಾವಿರ ಕಾರ್ಮಿಕರ ಮುಷ್ಕರವು ತಾ. 26-12-80ರಂದು ಆರಂಭವಾಗಿ ಈಗಲೂ ಮುಂದುವರಿದಿದೆ. ಹೈದರಾಬಾದ್ ಮತ್ತಿತರ ಕಡೆಗಳಲ್ಲೂ ಮುಷ್ಕರ ನಡೆಯುತ್ತಿದ್ದು ಇಷ್ಟು ದೊಡ್ಡ ಪ್ರಮಾಣದ ಹೋರಾಟ ಈ ವರೆಗೆ ನಡೆದಿಲ್ಲವೆಂದೇ ಹೇಳಬಹುದು, ಈ ಹೋರಾಟದಲ್ಲಿ ಎಲ್ಲ ವಿಭಾಗದ ಕಾರ್ಮಿಕರೂ ಭಾಗವಹಿಸಿ ತಮ್ಮ ಐಕ್ಯತೆಯನ್ನು ಪ್ರದರ್ಶಿಸಿದ್ದಾರೆ.

ಈ ಮುಷ್ಕರವು ಹೊಸ ಬೇಡಿಕೆಗಳಿಗಾಗಿ ನಡೆಯುವ ಹೋರಾಟವಲ್ಲ. 1978ರಲ್ಲಿ ಬೆಂಗಳೂರಿನ ಪಬ್ಲಿಕ್ ಸೆಕ್ಟರ್‌ನ ಕಾರ್ಮಿಕಸಂಘಗಳು ಮಾಲೀಕರೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಒಂದಂಶವನ್ನು ಸೇರಿಸಲಾಗಿತ್ತು. ಅದೇನೆಂದರೆ ಇತರ ಯಾವುದೇ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಯಲ್ಲಿ ಹೆಚ್ಚು ಸಂಬಳ, ತುಟ್ಟಿಭತ್ತೆಗಳ ಒಪ್ಪಂದವಾದರೆ ಅದೇ ಪ್ರಮಾಣದಲ್ಲಿ ಇಲ್ಲಿಯ ಕಾರ್ಮಿಕರಿಗೂ ವೇತನ ಹೆಚ್ಚಿಸಬೇಕೆಂದು ಕರಾ

ಸಂಪಾದಕೀಯ

ರಾಗಿತ್ತು. 1980 ಜನವರಿಯಲ್ಲಿ ಭಾರತ್ ಹೆವಿ ಇಲೆಕ್ಟ್ರಿಕಲ್ಸ್‌ನಲ್ಲಿ ಆದ ಒಪ್ಪಂದದಲ್ಲಿ ವೇತನ ಹೆಚ್ಚಳದ ಒಪ್ಪಂದವಾಯಿತು. ಅದಾದ ಕೂಡಲೇ ಅದೇ ವೇತನವನ್ನು ಇಲ್ಲೂ ಕೊಡಬೇಕೆಂದು ಕಾರ್ಮಿಕನಾಯಕರು ಕೇಳಬೇಕಿತ್ತು. ಆದರೆ ತಡವಾಗಿಯಾದರೂ ಇತ್ತೀಚಿಗೆ ಅದನ್ನು ಮುಂದಿಟ್ಟರು. ಮ್ಯಾನೇಜ್‌ಮೆಂಟ್‌ನವರು ಅದನ್ನು ವಿರೋಧಿಸಿದರು. ಕೊನೆಗೆ ಅನಿವಾರ್ಯವಾಗಿ ಕಾರ್ಮಿಕರು ಮುಷ್ಕರ ಹೂಡಬೇಕಾಗಿ ಬಂದಿದೆ. 1978ರಲ್ಲಿ ಮಾಲೀಕರು ಕೊಟ್ಟ ಲಿಖಿತ ಆಶ್ವಾಸನೆಯನ್ನು ಜಾರಿಮಾಡಬೇಕೆಂಬುದೊಂದೇ ಈ ಹೋರಾಟದ ಬೇಡಿಕೆಯಾಗಿದೆ.

ಕಾಂಗ್ರೆಸ್ ಸರಕಾರಕ್ಕೆ ಯಾವ ಒಡಂಬಡಿಕೆಯಲ್ಲೂ ನಂಬಿಕೆಯಿಲ್ಲವೆಂಬುದನ್ನು ಇದು ತೋರಿಸುತ್ತದೆ ಹಿಂದೆ ಜೀವವಿಮೆ ಸಂಸ್ಥೆಯಲ್ಲಿ ಬೋನಸ್ ಬಗ್ಗೆ ಆದ ಒಪ್ಪಂದವನ್ನು ಮುರಿಯಿತು. ಇದು ತಪ್ಪೆಂದು ಸುಪ್ರೀಂಕೋರ್ಟಿನಲ್ಲಿ ತೀರ್ಮಾನವಾದರೂ ಅದನ್ನು ತುಚ್ಛೀಕರಿಸಿ ಸರಕಾರ ಅನ್ಯಾಯಮಾಡುತ್ತಿದೆ. ಸರಕಾರದ ಈ ಧೋರಣೆ ಇಡೀ ಕಾರ್ಮಿಕ ವರ್ಗಕ್ಕೊಂದು ಸವಾಲಾಗಿದೆ. ಸರಕಾರದ ಈ ಧೋರಣೆಯನ್ನು ಕಾರ್ಮಿಕರೆಲ್ಲರೂ ವಿರೋಧಿಸಬೇಕೆಂದೂ ಮುಷ್ಕರಕ್ಕೆ ಬೆಂಬಲಕೊಡಬೇಕೆಂದೂ ನಾವು ವಿನಂತಿಸುತ್ತೇವೆ. ಈ ಹೋರಾಟ ಯಶಸ್ವಿಯಾಗಲೆಂದು ನಮ್ಮ ಹಾರೈಕೆ.

ಪ್ರಗತಿಪರ ಜನತಂತ್ರ ರಂಗದ ಉದಯ

ರಾಜ್ಯದಲ್ಲೂ ಬೆಳೆಯುತ್ತಿರುವ ಹೋರಾಟಗಳಿಗೆ ಮೂರ್ತ ಸ್ವರೂಪ ಕೊಟ್ಟು, ಸರ್ವಾಧಿಕಾರಿ ಶಕ್ತಿಗಳಿಗೆ ಪರ್ಯಾಯವಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಜೊತೆಗೂಡಿ "ಕರ್ನಾಟಕ ಜನತಂತ್ರ ರಂಗ"ದ ಉದಯಕ್ಕೆ ಬುನಾದಿ ಹಾಕಿವೆ.

ಕಳೆದ ಸೆಪ್ಟೆಂಬರ್ 16ರಂದು ನಡೆದ ವಿರೋಧಿ ಪಕ್ಷಗಳ ಸಭೆಯ ಮುಂದಿನ ಹಂತವಾಗಿ ಜನವರಿ 2ರಂದು ಮತ್ತೆ ಸಭೆ ಸೇರಿದ್ದವು. ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ (ಯು) ಮತ್ತು ಲೋಕದಳ ರಾಜ್ಯಮಟ್ಟದ ಧುರೀಣರು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಜನತಾ ಪಕ್ಷದ ರಾಜ್ಯ ಘಟಕಕ್ಕೂ ಆಹ್ವಾನಿಸಲಾಗಿತ್ತು. ಇವರುಗಳಲ್ಲದೇ ಸಾಮೂಹಿಕ ಸಂಘಟನೆಗಳ ನಾಯಕರು ಸಹ ಈ ಸಭೆಗೆ ಆಗಮಿಸಿದ್ದರು. ವಿಧಾನಸಭೆಯ ವಿರೋಧಿ ಪಕ್ಷದ ನಾಯಕ ಕಾಂಗ್ರೆಸ್ (ಯು)ನ ಶ್ರೀ ಡಿ.ಬಿ. ಚಂದ್ರೇಗೌಡರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಜನವರಿ 3ಕ್ಕೂ ಮುಂದುವರಿದ ಈ ಸಭೆ ಕೆಲವು ಮಹತ್ವದ ನಿರ್ಣಯಗಳನ್ನು ಕೈಗೊಂಡಿದೆ.

ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಬಲಪಡಿಸಲು ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸಲು ನಿರ್ಧರಿಸಿ ಮೇಲ್ಕಾಣಿಸಿದ ಪಕ್ಷಗಳ, ಸಾಮೂಹಿಕ ಸಂಘಟನೆಗಳನ್ನೊಳಗೊಂಡ "ಕರ್ನಾಟಕ ಜನತಂತ್ರ ರಂಗ" ಎಂಬ ವೇದಿಕೆಯನ್ನು ರಚಿಸಲಾಯಿತು. ಈ ರಂಗದ ನೇತೃತ್ವದಲ್ಲಿ "ರೈತ-ಕಾರ್ಮಿಕರ ಹೋರಾಟ ಸಮಿತಿ" ಎಂಬ ವೇದಿಕೆಯನ್ನು ರೂಪಿಸಲಾಯಿತು. ಈ ವೇದಿಕೆಗೆ ಶ್ರೀ ಚಂದ್ರೇಗೌಡರು ಸಂಚಾಲಕರಾಗಿಯೂ, ಶ್ರೀ ನಂಜೇಶಗೌಡ, ಕಾಂ. ಎಂ. ಕೆ. ಭಟ್ ಮತ್ತು ಕಾಂ.ಬಿ.ವಿ. ಕಕ್ಕಿಲ್ಲಾಯರನ್ನು ಸಹ ಸಂಚಾಲಕರುಗಳಾಗಿರುವ ಮತ್ತು 33 ಜನ ಸದಸ್ಯರಿರುವ ಸಮಿತಿಯೊಂದನ್ನು ಆಯ್ಕೆಮಾಡಲಾಗಿದೆ.

ನಿರ್ಣಯಗಳು

1. ದೇಶದ ಮತ್ತು ರಾಜ್ಯದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಲಾಯಿತು. ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರ ವಹಿಸಿಕೊಂಡು ಒಂದು ವರ್ಷವಾಗಿದ್ದರೂ, ಜನತೆಯನ್ನು ಬಾಧಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ರಚನಾತ್ಮಕ ಕಾರ್ಯಕ್ರಮ ಹಾಕಿಕೊಳ್ಳದೇ, ಈ ಎಲ್ಲ ಸಮಸ್ಯೆಗಳಿಗೂ ಹಿಂದಿನ ಆಡಳಿತ ಮತ್ತು ವಿರೋಧಿ

(ಕಡೇ ಪುಟ ನೋಡಿ)

ರಾಜಧಾನಿಗೆ ಮಣ್ಣಿನಮಕ್ಕಳ ಬೃಹತ್ ಜಾಥಾ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ (ಯು), ಲೋಕದಳದ ಪ್ರತಿನಿಧಿಗಳು ಜನವರಿ 2 ಮತ್ತು 3ರಂದು ಸೇರಿ ಚರ್ಚಿಸಿ, ರಾಷ್ಟ್ರೀಯ ಮಟ್ಟದಲ್ಲಿ ಆರು ಪಕ್ಷಗಳು ನಡೆಸಿರುವ ಪ್ರಯತ್ನಗಳ ಹಿನ್ನೆಲೆ ಮತ್ತು ರಾಜ್ಯದಲ್ಲಿ ಒಂದು ಬದಲೀ ಶಕ್ತಿಯನ್ನು ಬೆಳೆಸುವತ್ತ ಶ್ರಮಿಸಬೇಕೆಂದು ತೀರ್ಮಾನಿಸಲಾಯಿತು. ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳನ್ನೊಳಗೊಂಡ "ಕರ್ನಾಟಕ ಪ್ರಗತಿಪರ ಜನತಂತ್ರರಂಗ"ವನ್ನು ರೂಪಿಸಲಾಗಿದೆ ಈ ದಿಸೆಯಲ್ಲಿ ಫೆಬ್ರವರಿ ಮಾರ್ಚ್ ತಿಂಗಳಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಮಾವೇಶಗಳನ್ನು ನಡೆಸಬೇಕೆಂದೂ ಅಭಿಪ್ರಾಯ ಪಡಲಾಗಿದೆ.

ಸಧ್ಯ ರಾಜ್ಯದಲ್ಲಿ ನಡೆದುಬಂದಿರುವ ರೈತರ ಚಳುವಳಿ ಕಾರ್ಮಿಕರ ಚಳುವಳಿ ಮತ್ತು ಇತರ ವಿಭಾಗದ ಹೋರಾಟಗಳನ್ನು ವಿಮರ್ಶಿಸಿ, ಸರಕಾರದ ವಿಫಲತೆಯನ್ನು ಪ್ರತಿಭಟಿಸಿ ನ್ಯಾಯಪಡೆಯುವುದಕ್ಕಾಗಿ ರೈತ-ಕಾರ್ಮಿಕರನ್ನು ಇತರ ಜನತೆಯನ್ನು ಹೋರಾಟಕ್ಕಿಳಿಸಲು ರೈತ-ಕಾರ್ಮಿಕ ಹೋರಾಟ ಸಮಿತಿಯೊಂದನ್ನು ರೂಪಿಸಲಾಗಿದೆ.

ರೈತ-ಕಾರ್ಮಿಕ ಹೋರಾಟ ಸಮಿತಿಯು ತನ್ನ ಕಾರ್ಯಕ್ರಮದ ಮೊದಲ ಹೆಜ್ಜೆಯಾಗಿ, ರೈತಹೋರಾಟ ಪ್ರಥಮವಾಗಿ ಸ್ಫೋಟಗೊಂಡ ಚಾರಿತ್ರಿಕ ಸ್ಥಳವಾದ ನಂಗುಂದ (ಧಾರವಾಡ ಜಿಲ್ಲೆ)ದಿಂದ ಬೆಂಗಳೂರಿಗೆ ರೈತ-ಕಾರ್ಮಿಕರ ಬೃಹತ್ ಕಾಲ್ನಡಿಗೆ ಜಾಥಾವನ್ನು ಸಂಘಟಿಸಲಾಗಿದೆ ಈ ಜಾಥಾ ಜನವರಿ 16ಕ್ಕೆ ನರಗುಂದದಿಂದ ಹೊರಟು ರಾಜಧಾನಿ (ಬೆಂಗಳೂರು)ಯನ್ನು ಫೆಬ್ರವರಿ 5ರಂದು ಬೆಳಿಗ್ಗೆ ತಲುಪಲಿದೆ

ಕೆಲವು ಮುಖ್ಯ ಬೇಡಿಕೆಗಳನ್ನು ಮುಂದಿಟ್ಟು ಈ ಕಾರ್ಯಕ್ರಮ ನಡೆಸುವುದೆಂದೂ, ಪ್ರಚಾರ ಲಕ್ಷಗಟ್ಟಲೆ ಕರಪತ್ರ, ಸಾವಿರಾರು ಭಿತ್ತಿಪತ್ರ, ಬೇಡಿಕೆಗಳ ವಿವರಣೆಯಿಂದ ಕೂಡಿದ ಒಂದು ಸಣ್ಣ ಪುಸ್ತಕ ಇವೇ ಮೊದಲಾದವುಗಳ ಬಗ್ಗೆ ಯೋಜನೆ ಹಾಕಲಾಗುತ್ತಿದೆ.

ಶಿವಮೊಗ್ಗ, ಹಾಸನ ಕಡೆಯಿಂದ ಜಾಥಾಗಳು ಬಂದು ತುಮಕೂರು, ನೆಲಮಂಗಲಗಳಲ್ಲಿ ನರಗುಂದ ಜಾಥಾಕ್ಕೆ ಸೇರುವುದು. ರಾಯಚೂರು, ಬಿಜಾಪುರ, ಗುಲ್ಬರ್ಗಗಳ ಕಡೆಯವರು ನರಗುಂದ ಜಾಥಾಕ್ಕೆ ಸೇರಿಕೊಳ್ಳುವುದು ಕೋಲಾರ ಜಿಲ್ಲೆ ಮತ್ತು ಮೈಸೂರು ಕಡೆಯಿಂದ ಜಾಥಾಗಳು ಬಂದು ಬೆಂಗಳೂರು ನಗರದಲ್ಲಿ ನರಗುಂದ ಜಾಥಾದೊಡನೆ ಸೇರುವುದು. ನಗರದಲ್ಲಿ ಕಾರ್ಮಿಕರು ಜನತೆಯ ಬೆಂಬಲ ಪಡೆದು ಫೆಬ್ರವರಿ 5ರಂದು ಭಾರೀ ಪ್ರಮಾಣದ ಮಹಾಪ್ರದರ್ಶನವನ್ನು ವಿಧಾನ ಸೌಧದೆದುರು ನಡೆಸುವುದೆಂದೂ ತೀರ್ಮಾನಿಸಲಾಗಿದೆ.

ನರಗುಂದದಿಂದ ಪ್ರಾರಂಭವಾಗಿ ಬೆಂಗಳೂರು ತನಕ ಪ್ರಧಾನ ಜಾಥಾ ಬರುವ ದಾರಿಯುದ್ದಕ್ಕೂ ಮತ್ತು ಬೆಂಗಳೂರಿನಲ್ಲಿ ಭಾರೀ ವ್ಯವಸ್ಥೆ ಮಾಡುವ ದೃಷ್ಟಿಯಿಂದ ತಕ್ಷಣವೇ ಧಾರವಾಡ ಜಿಲ್ಲೆ, ಚಿತ್ರದುರ್ಗ ಜಿಲ್ಲೆ, ತುಮಕೂರು ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಸಂಬಂಧಿಸಿದ ಪಕ್ಷ ಮತ್ತು ಸಂಘಟನೆಗಳ ಪ್ರತಿನಿಧಿಗಳು ಸೇರಿ ಸ್ವಾಗತಸಮಿತಿಗಳನ್ನು ರಚಿಸುವುದಕ್ಕೆ ಶ್ರಮವಹಿಸಲಾದಿದೆ.

ನಮ್ಮ ಪಕ್ಷದ ಜಿಲ್ಲಾ ಸಮಿತಿ ಅಥವಾ ಸಂಘಟನಾ ಸಮಿತಿ (ಸಮಿತಿಗಳಿಲ್ಲದಿದ್ದಲ್ಲಿ ಸಂಘಟಕರು)ಗಳು ತಕ್ಷಣವೇ ಉಳಿದ ಪಕ್ಷಗಳ ಮುಖಂಡರುಗಳನ್ನು ಸಂಘಟಿಸಿ ಎಲ್ಲ ಜಿಲ್ಲೆಗಳಲ್ಲೂ ಜಿಲ್ಲಾ ಮಟ್ಟದಲ್ಲಿ ಹೋರಾಟ ಸಮಿತಿ, ಹೋರಾಟ ಯೋಜನೆಗಳನ್ನು ಹಾಕಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯೆಟ್ ವಿನಂತಿಸುತ್ತದೆ, ಇನ್ನೂ ಹೆಚ್ಚಿನ ವಿವರಗಳನ್ನು ಚರ್ಚಿಸಲು ಮತ್ತು ಹೋರಾಟದ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಬಗ್ಗೆ ಶ್ರಮವಹಿಸುವುದನ್ನು ಚರ್ಚಿಸಲು ರಾಜ್ಯ ಸಮಿತಿಯ ತುರ್ತು ಸಭೆಯನ್ನು 10-1-81ರಂದು ಬೆಂಗಳೂರಿನಲ್ಲಿ ಕರೆಯಲಾಗಿದೆ.

ಮುಖ್ಯ ಜಾಥಾದ ದಾರಿ, ತಂಗುವ ಸ್ಥಳ, ದಿನಾಂಕ :

16-1-81 ಬೆಳಿಗ್ಗೆ 10ಕ್ಕೆ ನರಗುಂದದಿಂದ ಪ್ರಾರಂಭ. 16-1-81 ರಾತ್ರಿ ನವಲಗುಂದ, 17-1-81 ಬೆಳಿಗ್ಗೆ ಹೊರಟು ರಾತ್ರಿ ಹೆಬ್ಬಾಳು, 18ರಂದು ಹುಬ್ಬಳ್ಳಿ, 19ರಂದು ಕುಂದಗೋಳ, 20ರಂದು ಶಿಗ್ಗಾಂವಿ, 21 ಬಂಕಾಪುರ, 22 ಹಾವೇರಿ, 23 ಬ್ಯಾಡಗಿ, 24 ರಾಣೆಬೆನ್ನೂರು, 25 ಹರಿಹರ, 26 ದಾವಣಗೆರೆ, 27 ಭರಮಸಾಗರ, 28 ಚಿತ್ರದುರ್ಗ, 29 ಹಿರಿಯೂರು, 30 ತಾವರಗೆರೆ, 31 ಕಳ್ಳಂಬೆಳ್ಳ, ಫೆಬ್ರವರಿ 1 ತುಮಕೂರು, ಫೆಬ್ರವರಿ 2 ದಾಬಸ್‌ಪೇಟೆ, 3 ನೆಲಮಂಗಲ 4ರಂದು ಬೆಂಗಳೂರು ನಗರದ ಹೊರವಲಯ ದಾಸರಹಳ್ಳಿ ಅಥವಾ ಪೀಣ್ಯ, 5ರಂದು ಮಧ್ಯಾಹ್ನ ಮೊದಲು ಬೆಂಗಳೂರು ನಗರದ ಸುಭಾಸ್‌ನಗರ ಬಸ್ ನಿಲ್ದಾಣದಲ್ಲಿ ಎಲ್ಲರೂ ಸೇರಿ ವಿಧಾನಸೌಧದತ್ತ ಹೋಗುವರು.

ತಕ್ಷಣದಿಂದಲೇ ಕಾರ್ಯೋನ್ಮುಖರಾಗುವಂತೆ ನಮ್ಮ ಎಲ್ಲಾ ಘಟಕಗಳಿಗೂ ಸೆಕ್ರೆಟಾರಿಯೇಟ್ ವಿನಂತಿಸಿದೆ.

ಪ್ರಮುಖ ಬೇಡಿಕೆಗಳು :

1. ರೈತ ಹೋರಾಟದಲ್ಲಿ ಬಂಧಿತರಾದ ಎಲ್ಲ ರೈತರ ಬೇಷರತ್ ಬಿಡುಗಡೆ.
2. ಕೃಷಿ ಉತ್ಪನ್ನಕ್ಕೆ ಸರಿಯಾದ ಬೆಲೆ

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಬಿಜಾಪುರ :

22-12-80 ರಂದು ಬಿಜಾಪುರ ದಲ್ಲಿ ರೈತರ ಮೆರವಣಿಗೆ ಹೊರಡಿಸ ಲಾಗಿತ್ತು. ಬರಗಾಲ ಪರಿಹಾರ ಕಾಮಗಿರಿ ಕೆಲವೇ ಸ್ಥಳಗಳಲ್ಲಿ ಪ್ರಾರಂಭವಾಗಿದ್ದು, ಕೆಲಸಗಾರರಿಗೆ ಪಗಾರ ಕೊಟ್ಟಿಲ್ಲ. ಜಿಲ್ಲೆಯಾದ್ಯಂತ ಬರಗಾಲ ಕಾಮಗಿರಿ ಪ್ರಾರಂಭಿಸುವಂತೆ ಒತ್ತಾಯಿಸಿ ಈ ಮೆರವಣಿಗೆ ಹೊರಡಿಸ ಲಾಗಿತ್ತು. ಮೆರವಣಿಗೆಯ ಮುಖಂಡತ್ವವನ್ನು ಬಿಜಾಪುರ ಜಿಲ್ಲಾ ರೈತ ಸಂಘದ ಕಾಂ. ಭೀಮಸಿ ಕಲಾದಗಿ, ಕಲ್ಲಪ್ಪಾ ಹೊರ್ತಿ, ವಿ.ಎಸ್. ಸೊನ್ನದ, ಎಲ್.ಕೆ. ಚಂಚಲಕರ ಮತ್ತು ಬಾಬೂರೆಡ್ಡಿ ತುಂಗಳರು ವಹಿಸಿದ್ದರು. ಜಿಲ್ಲಾಧಿಕಾರಿಗೆ ಬೇಡಿಕೆಗಳ ಬಗ್ಗೆ ಮನವಿ ಅರ್ಪಿಸಿದ ನಂತರ ಮೆರವಣಿಗೆಕಾರರನ್ನು ಉದ್ದೇಶಿಸಿ ಕಲ್ಲಪ್ಪಾ ಹೊರ್ತಿ ಮಾತನಾಡಿದರು.

ದೊಡ್ಡಬಳ್ಳಾಪುರ :

ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ 30-12-80ರಂದು ಕೊಂಗಾಡಿಯಪ್ಪ ಕಾಲೇಜು ಮತ್ತು ಸರಕಾರಿ ಜ್ಯೂನಿಯರ್ ಕಾಲೇಜು ವಿದ್ಯಾರ್ಥಿಗಳು ಸಭೆ ಸೇರಿ ಎಸ್.ಎಫ್.ಐ ನ ಹತ್ತನೇ. ವಾರ್ಷಿಕೋತ್ಸವವನ್ನು ಆಚರಿಸಿದರು.

ಸಭೆಯನ್ನು ಉದ್ದೇಶಿಸಿ ಕಾಂ. ಸಿ. ರಾಮಭದ್ರಯ್ಯ ಮತ್ತು ಕಾಂ. ಜಯಶೇಖರ ಅವರು ಎಸ್.ಎಫ್.ಐ ನ ಉದಯ ಮತ್ತು ಎಸ್.ಎಫ್.ಐ ನಡೆಸಿರುವ ಹೋರಾಟಗಳನ್ನು ವಿವರಿಸಿದರು.

ಸಕಲೇಶಪುರ :

ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಕರ್ನಾಟಕ ತೋಟಕಾರ್ಮಿಕರ ಕಾರ್ಯಕಾರಿ ಸಮಿತಿಯ ಸಭೆಯು ದಿನಾಂಕ 1-1-81ರಂದು ಕಾಂ. ಸಿ ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಳೆದ ಮಹಾಸಭೆಯ ನಂತರ ಸಂಘದ ಕಾರ್ಯಚಟುವಟಿಕೆಯನ್ನು ಕುರಿತು, ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ವಿ. ಸುಕುಮಾರ್ ಸಭೆಯ ಮುಂದಿಟ್ಟ ವರದಿಯನ್ನು ಸಭೆಯು ಚರ್ಚಿಸಿ ಅಂಗೀಕರಿಸಿತು. ದಿನಗೂಲಿ 12ರೂ. ಆಗಬೇಕೆಂದೂ, ಈ ಬೇಡಿಕೆ ಈಡೇರಿಕೆಗಾಗಿ ಜನವರಿ 20ರಂದು ಸಾಂಕೇತಿಕ ಮುಷ್ಕರವನ್ನು, 20-2-81 ರಿಂದ ಅನಿರ್ದಿಷ್ಟ ಅವಧಿಯ ಮುಷ್ಕರ ಪ್ರಾರಂಭಿಸುವ ನಿರ್ಧಾರ ಕೈಗೊಳ್ಳಲಾಯಿತು.

ಗುಲಬರ್ಗಾ :

30-12-80ರಂದು ಗುಲ್ಬರ್ಗಾದ ಎಸ್.ಎಫ್.ಐ. ಜಿಲ್ಲಾ ಘಟಕವು ವಿದ್ಯಾರ್ಥಿಗಳ ಬೇಡಿಕೆಗಳ ದಿನಾಚರಣೆ ಹಾಗೂ ಹತ್ತನೇ ವಾರ್ಷಿಕೋತ್ಸವ ಆಚರಿಸಿತು. ವಿದ್ಯಾರ್ಥಿಗಳ ಬೇಡಿಕೆ ದಿನಾಚರಣೆ ಅಂಗವಾಗಿ ಬೇಡಿಕೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಲಾಯಿತು. ಎಸ್.ಎಫ್.ಐ. ನಡೆದು ಬಂದ ದಾರಿ ಕುರಿತು ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ಶಿವಶರಣ ಮುಗಳಿ, ವಿಶ್ವನಾಥ ಹೊನ್ನಳ್ಳಿ ಮತ್ತು ಚಂದ್ರಶೇಖರ ತೇಂಗಳಿಯವರು ಮಾತನಾಡಿದರು.

ಶಿವಮೊಗ್ಗ :

ಶಿವಮೊಗ್ಗ ಅಕ್ಕಿಗಿರಣಿ ಕಾರ್ಮಿಕರ ಬೇಡಿಕೆಗಳ ಬಗ್ಗೆ ದೀರ್ಘ ಮಾತುಕತೆಗಳ ನಂತರ 3-1-81 ರಂದು ಲೇಬರ್ ಆಫೀಸರ ಸಮಕ್ಷಮದಲ್ಲಿ ಸೌಹಾರ್ದ ಒಪ್ಪಂದಕ್ಕೆ ಬರಲಾಯಿತು. ಯೋಗ್ಯ ಕೂಲಿದರದ ಬಗ್ಗೆಯೂ ಒಪ್ಪಂದವಾಯಿತು. ಸಂಘದ ಪರವಾಗಿ ಶ್ರೀ ತಿರುಕಪ್ಪ, ಕಾಂ ಚಂದ್ರಶೇಖರಪ್ಪಯವರು, ಮಾಲೀಕರ ಪರವಾಗಿ ಶ್ರೀ ಅಶ್ವಥನಾರಾಯಣ ಮತ್ತಿತರರು ಭಾಗವಹಿಸಿದ್ದರು.

ಸುಳ್ಯ :

ದ.ಕ. ಜಿಲ್ಲೆಯ ಸುಳ್ಯದಲ್ಲಿ ದಿನಾಂಕ 30-12-80 ರಂದು ಸ್ಥಳೀಯ ಜ್ಯೂನಿಯರ್ ಕಾಲೇಜಿನಲ್ಲಿ ಎಸ್.ಎಫ್.ಐ ನ ಹತ್ತನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಎಸ್.ಎಫ್. ಐ. ತಾಲ್ಲೂಕು ಕಾರ್ಯದರ್ಶಿ ಕಾಂ. ರಾಜಗೋಪಾಲ್, ಅಧ್ಯಕ್ಷ ಕಾಂ. ನಾರಾಯಣ ಮತ್ತು ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಮಹಮದ್ ಕುಂಞಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಇದೇ ರೀತಿ ಬೆಳ್ಳಾರೆ ಜ್ಯೂನಿಯರ್ ಕಾಲೇಜಿನಲ್ಲಿ ಸಹ ಈ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾಂ. ಕಾಶೀನಾಥ ಶೆಟ್ಟಿಯವರು ಧ್ವಜಾರೋಹಣ ಮಾಡಿದನಂತರ ಕಾಂ ಲಿಂಗಪ್ಪನವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಸಿಂಧನೂರು :

ರಾಯಚೂರ ಜಿಲ್ಲೆಯ ಸಿಂಧನೂರಿನಲ್ಲಿ ದಿನಾಂಕ 31-12-80 ರಂದು ಎಸ್.ಎಫ್.ಐ ನ ಹತ್ತನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಬೆಳಗ್ಗೆ 9-30ಕ್ಕೆ ಸ್ಥಳೀಯ ಘಟಕದ ಅಧ್ಯಕ್ಷರಾದ ಶ್ರೀ ಶಿವನೇಗೌಡ ಅವರು ಧ್ವಜಾರೋಹಣವನ್ನು ಮಾಡಿ ಮಾತನಾಡಿದರು. ನಂತರ ಸಿಂಧನೂರಿನ ಪ್ರಮುಖ ಬೀದಿಗಳಲ್ಲಿ ವಿದ್ಯಾರ್ಥಿಗಳು ಮೆರವಣಿಗೆ ಹೊರಡಿಸಿದ್ದರು. ಸಾಯಂಕಾಲ ನಡೆದ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ಸರಕಾರಿ ಕಾಲೇಜಿನ ಪ್ರಾಧ್ಯಾಪಕ ಶ್ರೀ ಶ್ರೀನಿವಾಸ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಿ. ವಿ. ಕಲ್ಲೂರ್ ಮತ್ತು ಡಾ. ಕರುಣಾ ಆಗಮಿಸಿದ್ದರು. ಎಸ್.ಎಫ್.ಐ. ನಡೆದ ಬಂದ ದಾರಿ ಕುರಿತು ಕಾಂ. ಶೋಭಾ ಮಾತನಾಡಿದರು. ಸಭೆಯ ನಂತರ ವಿದ್ಯಾರ್ಥಿಗಳು "ಹೊಸ ಬಾಳಿನೆಡೆಗೆ" ಎಂಬ ನಾಟಕವನ್ನು ಪ್ರದರ್ಶಿಸಿದರು.

○

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಸಾರ್ವತ್ರಿಕ ಮುಷ್ಕರ

[ಹಿಂದಿನ ಸಂಚಿಕೆಯಿಂದ]

ಸಿ.ಐ.ಟಿ.ಯು. ಬೆಂಬಲಿತ ಯೂನಿಯನ್ ಆದ "ಭಾರತ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್" ಮಾತ್ರ ಸರಿಯಾದಂತಹ ಬೇಡಿಕೆಯನ್ನು 19-9-80ರಂದೇ ಇಟ್ಟು ಬಿ.ಇ.ಎಲ್. ಕಾರ್ಮಿಕರಿಗೆ ಸಿಗಬೇಕಾದ ವ್ಯತ್ಯಾಸ ಸಂಬಳ ರೂ. 78/- ಎಂದು ವ್ಯಕ್ತಪಡಿಸಿದೆ.

ಬೇಡಿಕೆಯಲ್ಲಿ ಬೇರೆಯವರಿಗೆ ಇರುವ ಗೊಂದಲವನ್ನು ತೆಗೆದ.ಹಾಕಬೇಕಾದರೆ ಕೆಳಕಂಡಂತೆ ವಿಶ್ಲೇಷಣೆ ಮಾಡಬೇಕು. ಬಿ.ಎಚ್.ಇ.ಎಲ್. ಒಪ್ಪಂದದ ಮೂಲಭೂತ ತತ್ವಗಳು ಯಾವವು ಎಂದು ಕಂಡುಹಿಡಿಯುವದು. ಅವುಗಳು ಹೀಗೆ ಇವೆ.

1-9-78ರಂದು ಮೂಲವೇತನ ರೂ. 335/- ತುಟ್ಟಿಭತ್ಯೆ, 300 ಸೂಚ್ಯಂಕಕ್ಕೆ ರೂ. 129.90 ಪೈ. ಉಳಿದ ಸೂಚ್ಯಂಕ ಏಪ್ಪೇ ಇರಲಿ ಪ್ರತಿ ಸೂಚ್ಯಂಕಕ್ಕೂ ರೂ. 1.30 ಪೈ. ಆಗಬೇಕು

ಬೇರೆಬೇರೆ ಕಾರ್ಖಾನೆಗಳಲ್ಲಿ ಬೇರೆ ಬೇರೆ ಸೂಚ್ಯಂಕಗಳು ಇರುವ ಕಾರಣದಿಂದ ಆ ಕಾರ್ಖಾನೆಗಳಲ್ಲಿರುವ ಎಲ್ಲಾ ಯೂನಿಯನ್‌ಗಳೂ ಕೇಳಬೇಕಾಗಿರುವ ಬೇಡಿಕೆ 300 ಸೂಚ್ಯಂಕಕ್ಕೆ ರೂ. 129.90ಪೈ ಕೊಡಬೇಕೆಂದೂ ಮತ್ತು 300ಕ್ಕೆ ಮೇಲೆ ಪ್ರತಿಯೊಂದು ಸೂಚ್ಯಂಕಕ್ಕೂ ರೂ 1.30 ಪೈಸೆ ಕೊಡಬೇಕು ಎಂಬುದಷ್ಟೇ. ಮೂಲವೇತನ ಎಲ್ಲಾ ಕಡೆಯೂ ರೂ.335/- ಆಗಬೇಕೆಂದೂ ಕೇಳಬೇಕು. ಇದರಲ್ಲಿ ಯಾವ ಅನುಮಾನವೂ ಇಲ್ಲ.

ಬಿ ಎಚ್.ಇ.ಎಲ್. ಒಪ್ಪಂದ ಆಗಿ ಸುಮಾರು ಐದು ತಿಂಗಳು ಆದ ಮೇಲೆಯೂ ಬೆಂಗಳೂರಿನ ಯಾವ ಕಾರ್ಮಿಕ ಸಂಘಗಳೂ ಆ ಬೇಡಿಕೆಯನ್ನು ಎತ್ತಿದಿಲ್ಲ. ಬಿ.ಇ.ಎಲ್. ಕಾರ್ಖಾನೆಯಲ್ಲಿ ಇದ್ದ ಎಲ್ಲಾ ಯೂನಿಯನ್‌ಗಳೂ ಸೇರಿ ಬೆಳ್ಳಿಹಬ್ಬಕ್ಕೆ "ಚಳುವಳಿ" ಕೊಡಬೇಕೆಂದು ಹೇಳಿ 1 ದಿವಸದ ಮುಷ್ಕರವನ್ನು 1980ರ ಮೇ 2ರಂದು ನಡೆಸಿದರು. ಕಾರ್ಮಿಕರಿಗೆ ನ್ಯಾಯವಾಗಿ ಬರಬೇಕಾಗಿರುವ ಬಿ ಎಚ್.ಇ.ಎಲ್. ಒಪ್ಪಂದದ ಸೌಲತ್ತನ್ನು ಕೊಡಿಸುವ ಬದಲಾಗಿ ಬೆಳ್ಳಿ ಹಬ್ಬದ ಚಳುವಳಿ ಮಾತ್ರ ಕೇಳುವದು ಸರಿಯಲ್ಲವೆಂದು ಬಿ. ಇ. ಎಲ್. ಕಾರ್ಖಾನೆಯ ಸಿ ಐ ಟಿ.ಯು. ಬೆಂಬಲಿಗರು ಬಿ ಎಚ್.ಇ ಎಲ್. ಅಗ್ರಿಮೆಂಟಿನ ಬಗ್ಗೆ ಹೆಚ್ಚು ಮಾಹಿತಿಯನ್ನು ಕೊಡುವದಾಗಿ ಹೇಳಿದರು. ಬೇರೆ ಎಲ್ಲಾ ಕಾರ್ಮಿಕ ಸಂಘಗಳೂ ಸರಿಯಾದ ಬೇಡಿಕೆ ಇಡದೇ ಇದ್ದಾಗ ಬಿ ಇ.ಎಲ್.ನ ಸಿ ಐ ಟಿ ಯು. ಬೆಂಬಲಿಗರು ಬಿ.ಎಚ್.ಇ.ಎಲ್. ಒಪ್ಪಂದದ ಪೂರ್ತಿ ವಿವರವನ್ನು ಕಾರ್ಮಿಕರ ಮುಂದೆ 27-7-80 ರಂದು ಇಟ್ಟರು ಈ ಕರಪತ್ರಕ್ಕೆ ಬಿ ಇ ಎಲ್ ನ ಕಾರ್ಮಿಕರು ನೀಡಿದ ಬೆಂಬಲದಿಂದ 'ಭಾರತ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್' ರಚನೆಯಾಯಿತು. ಇವರ ಬೇಡಿಕೆಯೇ ರೂ. 78 ವ್ಯತ್ಯಾಸ ಇರುವದನ್ನು ಕೊಡಬೇಕೆಂಬುದು ಆಗಿದೆ.

ಹಿಂದಿನ ಎರಡು ಅಗ್ರಿಮೆಂಟುಗಳನ್ನು ಮಾಡಿದಾಗಲೂ ಕನಿಷ್ಟ ವೇತನ ಸಮಸೆಯನ್ನು ಪರಿಹಾರ ಕಾಣದಿದ್ದ ಸಂಘಗಳು ಸೇರಿಸಿ ಜಾಯಿಂಟ್ ಆಕ್ಷನ್ ಫ್ರಂಟ್ ಎಂದು ರಚನೆ ಮಾಡಿ ಕೇಳಿರುವದು ರೂ 35 ವ್ಯತ್ಯಾಸವನ್ನು. ಜಾಯಿಂಟ್ ಆಕ್ಷನ್ ಫ್ರಂಟ್‌ನವರು ಸರಿಯಾದ ಬೇಡಿಕೆ ಹಾಕಿಲ್ಲ ಎಂದು ಮಾತ್ರವಲ್ಲ, ಎಲ್ಲ ಕಾರ್ಮಿಕ ಸಂಘಗಳು ಒಟ್ಟು ಸೇರುವದರಲ್ಲಿ ವಿರೋಧವಾಗಿಯೂ ಇರುತ್ತಾರೆ. ಎಲ್ಲ ಕಾರ್ಖಾನೆಯಲ್ಲಿರುವ ಕಾರ್ಮಿಕರು ಇದನ್ನು ಪ್ರತಿಭಟಿಸಿದರೂ ಜಾಯಿಂಟ್ ಆಕ್ಷನ್ ಫ್ರಂಟ್‌ನವರು ತಮ್ಮ ಧೋರಣೆಯನ್ನು ಬದಲಾಯಿಸಿಲ್ಲ.

ಜೆ.ಎ ಎಫ್.ನವರು 26-12-80 ರಿಂದ ಅನಿರ್ದಿಷ್ಟಕಾಲದ ಮುಷ್ಕರದ ಕರೆ ನೀಡಿದಾಗ ತಮ್ಮ ಬೇಡಿಕೆಯಲ್ಲಿರುವ ವ್ಯತ್ಯಾಸವನ್ನು ತೋರಿಸದೆ ವರ್ಕರ್ಸ್ ಯೂನಿಯನ್ ಮತ್ತು ಸಿ.ಐ ಟಿ.ಯು. ಹೋರಾಟಕ್ಕೆ ಪೂರ್ಣ ಬೆಂಬಲ ನೀಡಿದವು. 26 ರಂದು ಮುಷ್ಕರ ಪ್ರಾರಂಭವಾಯಿತು. ಭಾರತದ ಬೇರೆ ಪ್ರದೇಶಗಳಲ್ಲಿರುವ ಕಾರ್ಖಾನೆಯ ಕಾರ್ಮಿಕರೂ ಮುಷ್ಕರದಲ್ಲಿ ಸೇರುತ್ತಿದ್ದಾರೆ. ಆದರೆ ಜಾರಿ ಆಗಬೇಕಾಗಿರುವ ಒಪ್ಪಂದವನ್ನು ಕೇಂದ್ರ ಸರಕಾರ ಜಾರಿ ಮಾಡದೇ ಕಾರ್ಮಿಕರನ್ನು ಹೋರಾಟಕ್ಕೆ ದೂಡಿರುವುದು ಖಂಡನಾರ್ಹ.

ಮಾಡಿದ ಒಪ್ಪಂದ ಜಾರಿ ಆಗದೆ ಕೇಂದ್ರ ಸರಕಾರ ತಡೆಯುವುದು ಇದು ಮೊದಲನೆಯದಲ್ಲ. ಎಲ್ ಐ ಸಿ.ಯಲ್ಲಿ ಆದ ಬೋನಸ್ ಒಪ್ಪಂದ ಮತ್ತು ಇತ್ತೀಚೆಗೆ ಆದ ಬಂದರು ಕಾರ್ಮಿಕರ ಒಪ್ಪಂದವನ್ನು ಹೀಗೆ ಕೇಂದ್ರ ಸರಕಾರ ಕಡೆಗಣಿಸಿದೆ.

ಕೇಂದ್ರ ಸರಕಾರದ ಈ ಕಾರ್ಮಿಕ ವಿರೋಧಿ ನೀತಿಯನ್ನು ಸೋಲಿಸಬೇಕಾದರೆ ಎಲ್ಲಾ ಕಾರ್ಮಿಕ ಸಂಘಟನೆಗಳೂ ಒಟ್ಟಿಗೆ ಸೇರಬೇಕಾಗಿದೆ ಈ ಹೋರಾಟವನ್ನು ಗೆಲ್ಲುವುದು ಭಾರತದ ಕಾರ್ಮಿಕ ಚಳುವಳಿಗೆ ಅತ್ಯಗತ್ಯವಾಗಿದೆ ಆದ್ದರಿಂದ ಎಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಎಲ್ಲ ಕಾರ್ಮಿಕ ಸಂಘಗಳು ಒಟ್ಟಿಗೆ ಸೇರಬೇಕಾಗಿದೆ

—ವಿ. ಜೆ. ಕೆ. ನಾಯರ್

ಇತ್ತೀಚಿನ ಬೆಳವಣಿಗೆ

ಈ ಮುಷ್ಕರದಿಂದಾಗಿ ಕೋಟ್ಯಾಂತರ ರೂಪಾಯಿಗಳ ಉತ್ಪಾದನೆ ಧಕ್ಕೆ ಬಂದಿದ್ದರೂ, ಆಡಳಿತ ವರ್ಗವಾಗಲೀ, ಸರಕಾರವಾಗಲೀ ಕಣ್ಮುಚ್ಚಿ ಕುಳಿತಿರುವದು ಖಂಡನೀಯ. ನಗರದ ವಿವಿಡೆ ಸಭೆಗಳಾಗುತ್ತಿವೆ ಕಾರ್ಮಿಕರ ಹೋರಾಟಕ್ಕೆ ಬೆಂಬಲವಾಗಿ ಸೌಹಾರ್ದ ಸಮಿತಿ ರಚಿಸಲ್ಪಟ್ಟಿದೆ. 6-1-81ರಂದು ನಗರದಲ್ಲಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಕೇಂದ್ರ ಮಂತ್ರಿ ಸ್ಟೀಫನ್‌ರ ಹೇಳಿಕೆಯನ್ನು ಗಮನಿಸಿದರೆ ಮುಷ್ಕರ ಕೊನೆಗೊಳಿಸುವ ಉದ್ದೇಶ ಸರಕಾರಕ್ಕಿಲ್ಲವೆಂದು ತೋರುತ್ತದೆ. "ಬಿ ಎಚ್. ಇ ಎಲ್ ಸಂಸ್ಥೆಯಲ್ಲಿ ಕೊಟ್ಟಷ್ಟೇ ವೇತನ ಕೊಡಬೇಕು ಎನ್ನುವ ಬೇಡಿಕೆಯನ್ನು ಒಪ್ಪುವುದಿಲ್ಲ... ಅದು ತುಂಬ ಅಪಾಯಕಾರಿಯಾದ ಬೇಡಿಕೆ' ಎಂದು ತಮ್ಮ ದಿವಾಳಿಖೋರತನವನ್ನು ಪ್ರದರ್ಶಿಸಿದ್ದಾರೆ.

ದಿನಾಂಕ 8-1-81ರಂದು ಮುಷ್ಕರದಲ್ಲಿರುವ ಕಾರ್ಮಿಕ ಬಾಂಧವರನ್ನುದ್ದೇಶಿಸಿ ಸಿ ಐ.ಟಿ.ಯು.ವಿನ ಪ್ರಧಾನ ಕಾರ್ಯದರ್ಶಿ ಕಾಂ|| ಪಿ. ರಾಮಮೂರ್ತಿಯವರು ಸರಕಾರದ ನಿಲುವನ್ನು ಖಂಡಿಸಿ ಮಾತನಾಡಿದ್ದಾರೆ. (ವಿವರ ಕೊನೆಯ ಪೇಜಿನಲ್ಲಿದೆ.)

ಒಟ್ಟಿನ ಮೇಲೆ ಚಾರಿತ್ರಿಕವಾದ ಈ ಮುಷ್ಕರ ಸಾರ್ವಜನಿಕರ ಬೆಂಬಲದಿಂದ ಅಭೂತಪೂರ್ವವಾಗಿ ನಡೆಯುತ್ತಿದೆ. ಸರಕಾರದ ಬೇಜವಾಬ್ದಾರಿ ವರ್ತನೆಗೆ ಕಾರ್ಮಿಕರು ತಕ್ಕ ಪಾಠ ಕಲಿಸುವದು ಖಂಡಿತ.

ತಿದ್ದುಪಡಿ

ಕಳೆದ ವಾರದ (4-1-81) ಈ ಲೇಖನದ ಮೊದಲ ಭಾಗದ ಎರಡನೇ ಕಾಲಂನಲ್ಲಿ 9ನೇ ಸಾಲಿನಲ್ಲಿ ಸೂಚ್ಯಂಕ ರೂ. 314 ಎಂದಿದೆ. ಇದನ್ನು ಸೂಚ್ಯಂಕ 314 ಎಂದೂ, 15 ಸಾಲಿನಲ್ಲಿ ರೂ 395ರ ಬದಲು ರೂ 305 ಎಂದೂ ತಿದ್ದಿಕೊಳ್ಳಬೇಕಾಗಿ ಪ್ರಾರ್ಥನೆ

ತಿರುಗಿ ಬಾರದ ಪಥದಲ್ಲಿ ಕಾಣೆಯಾದ

ಅಮರ ಕವಿ - ಸಾಹಿರ

ತನ್ನ ವಿಚಾರ, ಅಪ್ರತಿಮ ಪ್ರತಿಭೆ ಹಾಗೂ ಸ್ವಾಭಿಮಾನಗಳಿಂದ ಜನಕೋಟಿಯ ಸ್ವಪ್ನವನ್ನು ಕಾವ್ಯದಲ್ಲಿ ಸಾಕಾರಗೊಳಿಸಿದ ಅಮರ ಕವಿ ಸಾಹಿರ ಲುಧಿಯಾನ್ವಿ ಅವರು ಕಳೆದ ಅಕ್ಟೋಬರ್ 25ರಂದು ಹೃದಯಾಘಾತದಿಂದ ನಿಧನರಾದರು. ನಿಜವಾಗಿಯೂ ನಿರ್ಜೀವ ಶಬ್ದಗಳಲ್ಲಿ ಎಷ್ಟೊಂದು ಜೀವಂತತನ ತರಬಲ್ಲದೆಂಬುದನ್ನು ಸಾಹಿರ ತೋರಿಸಿಕೊಟ್ಟಿದ್ದಾರೆ! ಮುಖದ ಮೇಲೆ ಸಿಡುಬಿನ ಕಲೆ ಇದ್ದ ಸಾಹಿರರ ಹೃದಯ ಸಂಪತ್ತಿ ಎಷ್ಟು ಅಗಾಧವಿದ್ದಿತೆಂಬುದು ಅವರ ಕಾವ್ಯದ ಪ್ರತಿಯೊಂದು ಸಾಲು ವ್ಯಕ್ತಪಡಿಸುತ್ತಿದೆ.

8 ಮಾರ್ಚ್ 1923ರಂದು ಪಂಜಾಬದ ಲುಧಿಯಾನಾದಲ್ಲಿ ಜನಿಸಿದ ಕವಿ ಸಾಹಿರರು ಅಲ್ಲಿಯೇ ಶಿಕ್ಷಣ ಪಡೆದರು. ಇನ್ನೂ ಅವರು ಚಿಕ್ಕವರಿದ್ದಾಗಲೇ ತಂದೆ ತಾಯಿಗಳು ಪರಸ್ಪರ ಅಗಲಿದರು. ಆದರೆ ತಾಯಿ ಬೇಗಂ ಸರದಾರ ಸಾಹಿರರನ್ನು ಬಹಳ ಪ್ರೀತಿಯಿಂದ ಬೆಳೆಸಿದರು. ಅವರಿಗೆ ಯಾವುದರಲ್ಲೂ ಕಡಿಮೆ ಮಾಡಲಿಲ್ಲ. ಸಾಹಿರರಿಗೆ ಇಬ್ಬರು ಸಹೋದರಿಯರಿದ್ದಾರೆ. ಒಬ್ಬಳು ಅಲಹಾಬಾದದಲ್ಲಿ ಇದ್ದಾಳೆ ಇನ್ನೊಬ್ಬ ಸಹೋದರಿ ಅನವರ ಸಾಹಿರರ ಜೊತೆಯಲ್ಲಿಯೇ ಇರುತ್ತಿದ್ದಳು.

ಸಾಹಿರರು ವಿದ್ಯಾರ್ಥಿ ಜೀವನದಿಂದಲೇ ಕವಿಗಳಾಗಿದ್ದರು. ಅವರ ಮೊದಲ ಪುಸ್ತಕ "ತಲಖಿಯಾ" 1944ರಲ್ಲಿ ಪ್ರಕಟವಾಯಿತು. ಆಗ ಅವರು ಕಾಲೇಜಿನಲ್ಲಿ ಓದುತ್ತಿದ್ದರು. ಮುಂದೆ 1945ರಲ್ಲಿ ಹಿಂದಿ ಸಿನೆ-ಜಗತ್ತಿಗೆ ಪರಿಚಿತರಾದರು. ಪ್ರಥಮವಾಗಿ "ನೌಜವಾನ" ಚಿತ್ರಕ್ಕೆ ಹಾಡುಗಳನ್ನು ಬರೆದರು.

ತದನಂತರ "ಪರಛಾಂಯಿಯಾ" "ಆವೊ ಕಿ ಕೊಯಿ ಖ್ವಾಬ ಬುನೆ" ಹಾಗು "ಗಾತಾ ಜಾಯೆ ಬಂಜಾರಾ" ಕವನ ಸಂಕಲನಗಳು ಪ್ರಕಟಗೊಂಡವು. "ತಲಖಿಯಾ" ಇದು 25ನೇ ಆವೃತ್ತಿ ಕಂಡಿತು. ಹಾಗೂ ಕನ್ನಡವೂ ಸೇರಿದಂತೆ ಎಲ್ಲ ಪ್ರಾದೇಶಿಕ ಹಾಗೂ ವಿದೇಶಿ ಭಾಷೆಗಳಿಗೂ ಇವರ ಹಾಡುಗಳು ಅನುವಾದಗೊಂಡಿವೆ 1970ರಲ್ಲಿ ಅವರಿಗೆ "ಪದ್ಮಶ್ರೀ"ಯಂಥ ಅತ್ಯುಚ್ಚ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಮುಂಬಯಿಯ ಸಿನೆ-ಜಗತ್ತಿನ ಗಲೀಚ್ಚ ವಾತಾವರಣದಲ್ಲಿ ಸಾಹಿರ ಬಾಳಿದರು. ಆದರೆ ಸ್ವಾಭಿಮಾನವೇ ನೆಂಬುದನ್ನು ಅವರು ತಮ್ಮ ಮೂವತ್ತೈದು ವರ್ಷಗಳ ಕಾಲಾವಧಿಯ ಸೇವೆಯಿಂದ ಇಡಿಯ ಜಗತ್ತಿಗೆ ತೋರಿಸಿಕೊಟ್ಟರು. ತನ್ನ ವಿಚಾರ, ಪ್ರತಿಭೆ ಹಾಗೂ ಸ್ವಾಭಿಮಾನಗಳೊಡನೆ ಅವರು ಎಂದಿಗೂ ಸಂಧಾನ ಮಾಡಲಿಲ್ಲ. ಹಾಗೂ ಎದೆಯುಬ್ಬಿಸಿ ಸಿನೆ-ಜಗತ್ತನ್ನು ತಮ್ಮ ಕಾವ್ಯದಿಂದ ತುಂಬಿದರು.

ಸಾಹಿರ ಇಡಿಯ ಆಯುಷ್ಯ ಅವಿವಾಹಿತ ಉಳಿದರು. ಭಗ್ನ ಪ್ರೇಮಿ ಎಂದು ಅವರ ಬಗ್ಗೆ ಹೇಳಲಾಗುತ್ತಿದೆ. ಆದರೆ ಸಾಹಿರರ ಮಾತೃಪ್ರೇಮ ಎಲ್ಲರನ್ನೂ ಆಕರ್ಷಿಸಿಕೊಂಡಿರುತ್ತದೆ. ಹೆಂಡತಿಯದು ತಾಯಿಯೊಡನೆ ಹೊಂದದಿದ್ದರೆ-ಎಂಬ ವಿಚಾರದಿಂದ ಅವರು ಲಗ್ನದ ವಿಚಾರವನ್ನು ದೂರವಿರಿಸಿದರೆಂದೂ ಊಹಿಸಲಾಗುತ್ತಿದೆ ಆದರೆ ಸಾಹಿರರ ಹೃದಯದ ನೋವು "ಪ್ಯಾಸಾ" ಚಿತ್ರದಲ್ಲಿಯ ಈ ಅವರ ಪದ ಪಂಕ್ತಿಗಳಿಂದ ವ್ಯಕ್ತವಾಗುತ್ತದೆ.

ಜಾನೆವೊ ಕೈಸೆ ಲೋಗ ಥೆ
ಜಿನ ಕೆ ಪ್ಯಾರ ಕೋ ಪ್ಯಾರ ಮಿಲಾ
ಹಮನೆ ತೊ ಜಬ ಕಲಿಯಾ ಮಾಂಗಿ
ಕಾಂಟೊಂ ಕಾ ಹಾರ ಮಿಲಾ

[ಆ ಜನರ ಪ್ರೇಮಕ್ಕೆ ಪ್ರೇಮದ ಪ್ರತಿಫಲ ದೊರೆಯಿತು. ನಾವು ಮೊಗ್ಗನ್ನು ಬಯಸಿದರೆ ಮುಳ್ಳಿನ ಮಾಲೆ ದೊರೆತಿದೆ]

ಪ್ರೀತಿಯ ಜಗತ್‌ನಲ್ಲಿ ವ್ಯಾಪಾರ ಪ್ರವೇಶಿಸಿದ ಅನುಭವವು ಸಾಹಿರರ ಈ ಕವಿತೆ ಮೂಲಕ ಬರುತ್ತದೆ.

ಸೋನೆ ಚಾಂದೀ ಮೆ ತುಲತಾ
ಜಹಾಂ ದಿಲೋಂ ಕಾ ಪ್ಯಾರ
ಆಂಸೂಭಿ ಬೇಕಾರ ಯಹಾಂ ಪರ
ಆಹೆಂ ಭೀ ಬೇಕಾರ

[ಚಿನ್ನ-ಬೆಳ್ಳಿಗಳಿಂದ ಪ್ರೇಮವನ್ನು ಅಳೆಯಲಾಗುತ್ತಿದೆ. ಇಂಥ ಸ್ಥಳದಲ್ಲಿ ಮನುಷ್ಯನ ಇರುವಿಕೆಗೇ ಅರ್ಥವಿಲ್ಲ]

ಈ ಶಬ್ದಗಳಲ್ಲಿ ಎಷ್ಟು ನೋವು ಇದೆ ಹಾಗೂ ಅಸಹಾಯತೆ ಇದೆ ಎಂಬುದನ್ನು ಹೇಳುವುದಕ್ಕೆ ಬೇಡ

ಆದರೆ ಇದರಿಂದ ಸಾಹಿರ ಪ್ರಣಯ ರೀತಿಗಳನ್ನು ಹಾಡುವ ಕವಿಯೆಂದು ಅಪಾರ್ಥ ಮಾಡಿಕೊಳ್ಳಲಾಗದು. ಸಾಹಿರ ಒಬ್ಬ ಕ್ರಾಂತಿಕಾರಿ ಕವಿ. ಪ್ರಾರಂಭದಿಂದಲೇ ವ್ಯವಸ್ಥೆಯ ವಿರುದ್ಧ ಅವರು ಹೋರಾಡಿದರು. ಸಾಮ್ರಾಜ್ಯವಾದಿ ವಿರೋಧಿ ಚಳವಳಿಯಲ್ಲಿಯೂ ಅವರ ಪಾತ್ರವಿದೆ ವಿದ್ಯಾರ್ಥಿ ಜೀವನದಲ್ಲಿ ಅವರು ಚಳವಳಿ ಮಾಡಿ ಕಾಲೇಜಿನಿಂದ ಹೊರ ಹಾಕಲ್ಪಟ್ಟರು. ಆದರೆ ಇದರಿಂದ ಅವರು ನಿರಾಶರಾಗಲಿಲ್ಲ.

ಹುಕುಮತ ಕೆ ಬುನಿಯಾದ ಢಾಯೆ ಚಲಾಜಾ, ಜವಾನೊಂ ಕೊ ಬಾಗಿ ಬನಾಯೆ ಚಲಾಜಾ, ಗರೀಬೊಂ ಕೆ ಟೂಟೆ ಚಿರಾಗೊಂ ಕೆ ಲೌ ಸೆ, ಅಮೀರೊಂ ಕೆ ಆಲಿಶಾನ ಜಲಾಯೆ ಚಲಾಜಾ

[ಯುವಕರಿಗೆ ಬಂಡಾಯದ ಕರೆ ಕೊಡುತ್ತಾ ಪ್ರಭುತ್ವದ ತಳಹದಿಯನ್ನೇ ಕಿತ್ತು ಬೀಸಾಡೋಣ
ಬಡವರ ಮನೆಯ ಮುರಕಲು ದೀಪದಿಂದ ಶ್ರೀಮಂತರ ದುರಾಸೆಗಳನ್ನು ದಹಿಸೋಣ!]

ಎಂದು ಹಾಡಿದ ಸಾಹಿರ ದುರ್ದೈವ, ಯೋಧ ಆದಕ್ಕಾಗಿ ಅವರು ಕೇಳುತ್ತಾರೆ.

ಧರತಿ ಕಿ ಸಲಗತಿ ಛಾತೀ ಕೆ ಬೇಚೈನ ಶರಾರೆ ಪೂಛತೆ ಹೈಂ, ಸಡಕೊಂ ಕಿ
ಜಹಾನ ಚಿಲ್ಲಾತಿ ಹೈ ಸಾಗರ ಕೆ
ಕಿನಾರೆ ಪೂಂಛತೆ ಹೈಂ ಯೆ ಕಿಸ್ಕಾ
ಲಹೂ ಹೈ ಕೌನ ಮರಾ ಐ ರಹಬರೆ
ಮುಲ್ಕ-ಎ-ಕೌಮ ಬತಾ ಐ ಅಜಮೆ
ಫನಾ ದೇನೆವಾಲೊ



ಪೈಗಾಮೆ ಕಫಾ ದೇನೆವಾಲೊ ಅಬ
ಆಗಸೆ ಕ್ಯೋಂ ಕತರಾತೆ ಹೊ
ಶೋಲೊಂ ಕೊ ಹವಾ ದೇನೆವಾಲೊ
ತೂಫಾನ ಸೆ ಅಬ ಡರತೆ ಕ್ಯೋಂ ಹೊ
ಮೌಜೊಂ ಕೊ ಸದಾ ದೇನೆ ವಾಲೊ
ಕ್ಯಾ ಭೂಲ ಗಯಾ ಅಪನಾ ನಾರಾ
ಐ ರಹಬರೆ ಮುಲ್ಕ-ಎ-ಕೌಮ ಬತಾ
ಯೆ ಕಿಸ್ಕಾ ಲಹೂ ಹೈ ಕೌನ ಮರಾ

[ಬೀದಿಯ ಮೇಲೆ, ಅನಾಥರಾಗಿ ಸಾಯುತ್ತಿರುವ ಬಾಂಧವರ ಬಗ್ಗೆ ದೇಶದ ನಾಯಕರಿಗೆ ಗಮನವಿದೆಯೇ? ಭೂತಾಯಿಯ ಹೃದಯದಾಳದಿಂದ ಚಡಪಡಿಸುತ್ತಿರುವ ಜ್ವಾಲೆಗಳು ಕೇಳುತ್ತಿವೆ!
ಸಾಗರದ ದಡಗಳು ಕೇಳುತ್ತಿವೆ!
ಇದು ಯಾರ ರಕ್ತ? ಸತ್ತವರು ಯಾರು? ನಾಶದ ಸಂದೇಶ ಬೀರುತ್ತಿರುವವರೇ ಬೆಂಕಿಗೆ ಗಾಳಿ ಹಾಕುತ್ತಿರುವವರೇ ಮರೆತಿರಾ ನಿಮ್ಮ ಘೋಷಣೆಗಳನ್ನು?]

ಸಾಹಿರ ತನ್ನ ಕಾವ್ಯವನ್ನು ಜನಸಾಮಾನ್ಯರ ಭಾಷೆಯಲ್ಲಿ ಬರೆದರು. ಅವರ ಸುಖ-ದುಃಖಗಳನ್ನು ವ್ಯಕ್ತಪಡಿಸಿದರು. ಸಾಮಾಜಿಕ ಅನ್ಯಾಯಗಳನ್ನು ಅವರು ತೀವ್ರ ಶಬ್ದಗಳಲ್ಲಿ ವಿರೋಧಿಸಿದರು. ಈ ಸಾಮಾಜಿಕ ಅನ್ಯಾಯದ ಪ್ರತೀಕರಾದ ವೇಶ್ಯಾಲಯ ಹಾಗು ವೇಶ್ಯೆಯರ ಬಗೆಗೆ ಅವರಲ್ಲಿ ಅಪಾದ ಅನುಕಂಪ ಇದ್ದಿತು. ಸಮಾಜ ವ್ಯವಸ್ಥೆಯಿಂದಾಗಿ ಸ್ತ್ರೀ ದೇಹವನ್ನು ಮಾರಿಕೊಳ್ಳುತ್ತಿದ್ದುದರ ಬಗ್ಗೆ ಅವರು ಕಟುವಾಗಿ ಬರೆದರು. ಅಂತೆಯೇ ಸಾಹಿರ ಅನ್ನುತ್ತಾರೆ :-

ಔರತ ನೆ ಜನಮ ದಿಯಾ ಮರ್ದೋಂ
ಕೊ ಮರ್ದೋಂ ನೆ ಉಸೆ ಬಾಜಾರ
ದಿಯಾ

[ಹೆಣ್ಣು ಗಂಡಸಿಗೆ ಜನ್ಮವಿತ್ತಳು. ಆದರೆ ಗಂಡು ಅವಳನ್ನು ಮಾರಾಟಕ್ಕಿಟ್ಟಿರುವನು.]

ಈ ಅನ್ಯಾಯದಿಂದ ರೊಚ್ಚಿಗೆದ್ದ ಕವಿ ಹೀಗೆ ಹಾಡಿದರು.

ಮರ್ದೋಂ ಕೆ ಲಿಯೆ ಹರ ಜುಲ್ಮ
ರವಾ ಔರತ ಕೆ ಲಿಯೆ ರೋನಾ ಭಿ
ಖತಾ ಮರ್ದೋಂ ಕೆ ಲಿಯೆ ಲಾಖೊ
ಸೇಜೆ ಔರತ ಕೆ ಲಿಯೆ ಬಸ್ ಏಕ ಚಿತಾ
ಮರ್ದೋಂ ಕೆ ಲಿಯೆ ಹರ ಐಶಕಾ ಹಕ
ಔರತ ಕೆ ಲಿಯೆ ಜೀನಾ ಭಿ ಸಜಾ

[ಪುರುಷನ ಅತ್ಯಾಚಾರಕ್ಕೆ ಸಮಾಜ ಮೌನವಾಗಿ ಸಮ್ಮತಿಸುತ್ತದೆ. ಆದರೆ ಮಹಿಳೆ ಕಣ್ಣೀರು ಸುರಿಸುವುದೂ ಅಪರಾಧ]

ಸಾಹಿರರು ರಕ್ತದ ಅಶ್ರುಗಳಿಂದ "ಮೈ ಓ ಫೂಲ ಹೂಂ ಜಿಸಕೊ ಗಯಾ ಹರ ಕೊಯಿ ಮಸಲ ಕೆ" ಎಂದು ರೋದಿಸಿದರು.

[ಎಲ್ಲರ ಕಾಲಡಿ ಸಿಲುಕಿ ತುಳಿಯಲ್ಪಟ್ಟು ಮುದುರಿದ ಹೂ ನಾನು]

ಅನಂತರ ಕ್ರೋಧ ಸಂತಪ್ತ ಕವಿ ಹಾಡಿದರು :-

ಯಹ ಸದಿಯೊಂ ಕೆ ಬೇಖ್ವಾಬ ಸಹೆ ಮೂಸಿ ಗಲಿಯಾಂ, ಯಹ ಮಸಲಿ ಹುಯಿ ಅಧಖಿಲ ಜರ್ದ ಕಲಿಯಾ ಯಹ ಬಿಕತಿ ಹುಯಿ ಖೋಖಲಿ ರಂಗ ರಲಿಯಾ ಜಿನ್ಹೆ ನಾಜ ಹೈ ಹಿಂದ ಪರ ವೊ ಕಹಾಂ ಹೈ? ಯಹಾಂ ಪೀರ ಭೀ ಆಚುಕೆ ಹೈಂ ಜವಾಂ ಭಿ, ತನೋಮಂದ ಬೇಟೆ ಭಿ ಅಬ್ಬಾ-ಮಿಯಾ ಭಿ ಯಹ ಬೀಬಿ ಭಿ ಹೈ ಬಹೆನ ಭೀ ಹೈ ಮಾ ಭೀ ಜಿನ್ಹೆ ನಾಜ ಹೈ ಹಿಂದ-ಪರ ವೊ ಕಹಾಂ ಹೈ? ಜರಾ ಮುಲ್ಕ ಕೆ ರಹಬರೋಂ ಕೊ ಬುಲಾವೊ, ಯಹ ಕೂಚೆ, ಯಹ ಗಲಿಯಾ ಯಹ ಮಂಜರ ದಿಖಾವೊ ಜಿನ್ಹೆ ನಾಜ ಹೈ ಹಿಂದ-ಪರ ವೊ ಕಹಾಂ ಹೈ? ಕಹಾಂ ಹೈ, ಕಹಾಂ ಹೈ, ಕಹಾಂ ಹೈ

[ನಮ್ಮ ಹೆಂಡತಿ, ತಾಯಿ, ತಂದಿಯರು ಇಲ್ಲಿ ಮಾರಾಟವಾಗುತ್ತಿದ್ದಾರೆ. ದೇಶದ ಮಹಾನ್ (?) ಸಂಸ್ಕೃತಿಯ ಬಗ್ಗೆ ಜಂಬ ಕೊಚ್ಚಿಕೊಳ್ಳುತ್ತಿರುವ ನಾಯಕಮಣಿಗಳನ್ನು ಕರೆತಂದು ಶರೀರ ವಿಕ್ರಯವಾಗುತ್ತಿರುವ ದೃಶ್ಯವನ್ನು ತೋರಿಸಿರಿ]

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸಾಹಿರ ಭ್ರಮನಿರಸನ ಹೊಂದಿದರು. ಜನತೆಯ ನೋವನ್ನು ಅರ್ಥ ಮಾಡಿಕೊಂಡರು.

ಯಹ ಜಶ್ನ-ಎ-ಮಸರತ ನಹಿಂ ತಮಾಶಾ ಹೈ ನಯೆ ಲಿಬಾಸ ಮೆ ನಿಕಲಾ ಹೈ ರಹಜಾನೊ ಕಾ ಜುಲೂಸ ಹಜಾರ ಶಮಾ-ಯೆ ಲಿಖೊವತ್ ಬುಜಾಕೆ ಚಮಕೆ ಹೈಂ ಯಹ ತೀರಗಿ ಕೆ ಉಭರೆ ಹುಯೆ ಹಂಸಿ ಫಾನೂಸ

[ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಬದಲು ನಮ್ಮವರೇ ನಮ್ಮನ್ನು ದೋಚುತ್ತಿದ್ದಾರೆ. ಸಹಸ್ರಾರು ಸೌಹಾರ್ದದ ದೀಪಗಳನ್ನು ನಂದಿಸಿ ಅಟ್ಟಹಾಸ ಮಾಡುತ್ತಿದ್ದಾರೆ]

ಸಾಂಪ್ರತದ ರಾಜಕೀಯ ಹಾಗು ಧಾಂಬಿಕತೆಯನ್ನು ಸಾಹಿರ ಕಟು ಶಬ್ದಗಳಲ್ಲಿ ಟೀಕಿಸಿದರು. ಸರಕಾರ ಈ ಕವಿತೆಯ ಮೇಲೆಯೇ ನಿರ್ಬಂಧ ಹಾಕಿತೆಂಬುದನ್ನು ಗಮನಿಸಬೇಕಾಗಿದೆ.

ಗಾಲಿಬ ಜಿಸೆ ಕಹತೆ ಹೊ ಉರ್ದು ಕಾ ಹಿ ಶಾಯರ ಥಾ ಉರ್ದು ಪೆ ಸಿತಮ ಕರ ಕೆ ಗಾಲಿಬ ಪೆ ಕರಮ ಕ್ಯೋಂ ಹೈ

[ಸ್ವಾತಂತ್ರ್ಯ ನಂತರ ಉರ್ದು ಭಾಷೆಯ ಬಗ್ಗೆ ಮಲತಾಯಿ ಧೋರಣೆ ಅನುಸರಿಸಿ, 'ಗಾಲಿಬ್'ನ ಶತಮಾನೋತ್ಸವ ಆಚರಿಸುವ ಧಾಂಬಿಕತನ ವೇಕೆ?]

ಜನತೆಯ ಮೇಲೆ ಭಾಷೆಯನ್ನು ಹೇರುವ ಸರಕಾರದ ನೀತಿಯನ್ನು ಸಾಹಿರ ಬಲವಾಗಿ ವಿರೋಧಿಸಿದರು.

ಸಮಾಜ ವ್ಯವಸ್ಥೆಯ ವಿರುದ್ಧ ಹೋರಾಡುವ ಶಕ್ತಿಗಳಿಗೆ ಸಾಹಿರ ಹೀಗೆ ಸಂದೇಶ ನೀಡಿದರು :-

ರಾತ ಕೆ ರಾಹಿ ಥಕ ಮತ ಜಾನಾ
ಸುಬಹ ಕಿ ಮಂಜಿಲ ದೂರ ನಹಿಂ

[ಕತ್ತಲೆಯ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಸಂಗಾತಿಯೇ ಆಯಾಸಗೊಳ್ಳಬೇಡ, ಮುಂಜಾವಿನ ಆಗಮನ ದೂರವಿಲ್ಲ]

ಮುಂದುವರಿದು ಹೇಳುವರು.

ಅಪನಾ ಸುಖ ಭಿ ಏಕ ಹೈ ಸಾಥಿ
ಅಪನಾ ದುಃಖ ಭಿ ಏಕ
ಅಪನಿ ಮಂಜಿಲ ಸಚ ಕಿ ಮಂಜಿಲ
ಅಪನಾ ರಸ್ತಾ ನೇಕ

[ನಮಗೆ ಸುಖ ಮತ್ತು ದುಃಖಗಳು ಸಂಗಾತಿಗಳು, ನಮ್ಮ ಗುರಿ ಸತ್ಯದ ಗುರಿಯಾಗಿದೆ ನಮ್ಮ ಮಾರ್ಗ ಯೋಗ್ಯವಾಗಿದೆ]

ಸಾಹಿರ ಇನ್ನೂ ಮುಂದುವರಿದು ಹಾಡಿದರು.

(6ನೇ ಪುಟ ನೋಡಿ)

ಪಾರ್ಟಿ ಸಂಘಟನೆಯ ಕುರಿತು ನಿರ್ಣಯ

೧೯೮೦ ಡಿಸೆಂಬರ್ ೨೪ರಿಂದ ೨೮ರ ತನಕ ಮೈಸೂರಿನಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಪ್ಲೀನಮ್ ಅಂಗೀಕರಿಸಿದ ಸಂಘಟನಾ ನಿರ್ಣಯಗಳನ್ನು ಇಲ್ಲಿ ಕೊಡಲಾಗಿದೆ.

1. 1980 ರ ಡಿಸೆಂಬರ್ 24 ರಿಂದ 28 ರ ತನಕ ಮೈಸೂರಿನಲ್ಲಿ ಜರುಗಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಪ್ಲೀನಮ್, ರಾಜ್ಯಸಮಿತಿ ಮಂಡಿಸಿದ ಕರಡು ವರದಿಯನ್ನು ಚರ್ಚಿಸಿತು.

ಈ ಕರಡು ವರದಿಯನ್ನು ಪಾರ್ಟಿಯ ಸಲ್ಕಿಯಾ ಪ್ಲೀನಮ್ ತೀರ್ಮಾನಗಳ ಆಧಾರದಲ್ಲಿ ತಯಾರಿಸಲಾಗಿತ್ತು. ವರದಿಯು ಕರ್ನಾಟಕದಲ್ಲಿ ಪಕ್ಷದ ಸಂಘಟನಾ ಪರಿಸ್ಥಿತಿಯನ್ನು ಪರಿಶೀಲಿಸಿತು.

1971-80 ರ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ಪಕ್ಷವು ಅನುಭವಿಸಿದ ಸಮಸ್ಯೆಗಳಂತಹ ವಿಶಿಷ್ಟವಾದ ಸಂಘಟನಾ ಸಮಸ್ಯೆಗಳು ಸಮಗ್ರವಾಗಿ ಪಕ್ಷದ ಸಾಮಾನ್ಯ ಸಂಘಟನಾ ಸಮಸ್ಯೆಗಳಿಗೆ ಮೂಲಕಾರಣಗಳಾಗಿವೆ.

ಪಂಥವಾದಿ ಸಂಘಟನಾ ಧೋರಣೆಗಳಂತಹ ಸಾಮಾನ್ಯ ಸಂಘಟನಾ ಸಮಸ್ಯೆಗಳನ್ನು ಸಲ್ಕಿಯಾ ಪ್ಲೀನಮ್‌ನಲ್ಲಿ ತಿದ್ದಲಾಗಿದೆ.

ಕರಡು ವರದಿಯು ಪಕ್ಷದ ರಾಜ್ಯ ಘಟಕದ ಸಂಘಟನೆಯಲ್ಲಿರುವ ದುರ್ಬಲತೆಗಳನ್ನು ಸ್ವಯಂ ಟೀಕೆಯ ನೆಲೆಯಲ್ಲಿ ವಿಮರ್ಶಿಸಿರುವ ಹಿನ್ನೆಲೆಯಲ್ಲಿ, ಈ ವಿಮರ್ಶೆಯಿಂದಾಗಿ ಪಕ್ಷದ ಸಂಘಟನಾ ಶಕ್ತಿಯು ಕುಂಠಿತಗೊಳ್ಳುವಂತಾಗಬಾರದು. ನಮ್ಮ ಪಕ್ಷವನ್ನು ಸಂಘಟನಾತ್ಮಕವಾಗಿ ಬೆಳೆಸಲು ಅನುಕೂಲಕರವಾದ ಪರಿಸ್ಥಿತಿಯು ಇಂದು ರಾಜ್ಯದಲ್ಲಿ ಇದೆ. ವ್ಯಾಪಕವಾಗಿ ಬೆಳೆಯುತ್ತಿರುವ ಸಾಮೂಹಿಕ ಸಂಘಟನೆಗಳೂ, ಅಲ್ಲಲ್ಲಿ ಉದ್ಭವಿಸುತ್ತಿರುವ ಸಾಮೂಹಿಕ ಹೋರಾಟಗಳೂ ಜನತೆಯ ಮಧ್ಯದಲ್ಲಿ ನಮಗೊಂದು ನೆಲೆಯನ್ನು ನಿರ್ಮಿಸಿಕೊಡುತ್ತವೆ. ಈ ಮೂಲಕ ನಮ್ಮ ಪಕ್ಷದ ರಾಜಕೀಯ ಧೋರಣೆಗಳನ್ನು ಸ್ಪಷ್ಟಪಡಿಸಿ, ಪಕ್ಷವನ್ನು ಬೆಳೆಸಲು ಮತ್ತು ಪಕ್ಷದ ಶಕ್ತಿಯನ್ನು ಕ್ರೋಢೀಕರಿಸಲು ಅನುಕೂಲಕರವಾದ ಸನ್ನಿವೇಶವು ಒದಗಿ ಬಂದಿದೆ.

ಸಂಘಟನಾ ನ್ಯೂನತೆಗಳನ್ನು ಪರಿಶೀಲಿಸುವುದರ ಜೊತೆಗೇ ಪಕ್ಷದ 10ನೇ ಅಧಿವೇಶನ ಮತ್ತು ಸಲ್ಕಿಯಾ ಪ್ಲೀನಮ್‌ನ ನಂತರ ರಾಜ್ಯದಲ್ಲಿ ಪಕ್ಷವು ಗಳಿಸಿದ ಸಾಧನೆಗಳನ್ನೂ ನಾವು ಗಮನಿಸಬೇಕಾಗಿದೆ.

ಕರಡು ವರದಿಯು ರಾಜ್ಯದಲ್ಲಿ ಪಕ್ಷದ ಸಂಘಟನಾ ದೌರ್ಬಲ್ಯಗಳ ಕಡೆಗೆ ಗಮನ ಸೆಳೆದಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ಸಂಘಟನಾ ಸಮಸ್ಯೆಗಳನ್ನು ನಾವು ಸಮಗ್ರವಾಗಿ ಪರಿಶೀಲಿಸಬೇಕಾಗಿದೆ.

ಆತ್ಮಪ್ರಿಕರವಾದ ಸಂಘಟನಾ ಪರಿಸ್ಥಿತಿಯಂತಹ ಅಂಶಗಳನ್ನು ಕರಡು ವರದಿಯಲ್ಲಿ ಒತ್ತಿ ಹೇಳಲಾಗಿದೆ. ಆದರೆ ಇದರ ಜತೆಗೇ ಅನುಕೂಲಕರವಾದ ಪ್ರಸಕ್ತ ಸನ್ನಿವೇಶವನ್ನೂ ನಾವು ಗಮನಿಸಬೇಕು.

2. ಟ್ರೇಡ್ ಯೂನಿಯನ್ ರಂಗದಲ್ಲಿ ಮತ್ತು ಪ್ರಜಾಸತ್ತಾತ್ಮಕ ಯುವಜನ ಸಂಘಟನೆ, ಎಸ್.ಎಫ್.ಐ., ಸಾಂಸ್ಕೃತಿಕ ಚಳುವಳಿ ಮೊದಲಾದ ರಂಗಗಳಲ್ಲಿ ನಮ್ಮ ರಾಜ್ಯ ಘಟಕವು ಮುನ್ನಡೆ ಸಾಧಿಸಿದೆ. ರಾಜ್ಯದಲ್ಲಿ ನಡೆದ ಸಾಮೂಹಿಕ ರೈತ ಚಳುವಳಿ ಮತ್ತು ಈ ಚಳುವಳಿಗೆ ಒಂದು ಹೊಸ ತಿರುವು ನೀಡಲು ಕೋಲಾರದಂತಹ ಪ್ರದೇಶಗಳಲ್ಲಿ ನಾವು ಸ್ವತಂತ್ರವಾಗಿ ನಡೆಸಿದ ಸಮರಶೀಲ ರೈತಚಳುವಳಿಗಳೂ, ಡಿಸೆಂಬರ್ 12ರಂದು ಬೆಂಗಳೂರಿನಲ್ಲಿ ನಡೆಸಿದ ರೈತ-ಕಾರ್ಮಿಕರ ಬೃಹತ್ ಪ್ರದರ್ಶನವೂ ಪಾರ್ಟಿ ಸಂಘಟನೆಯ ಶಕ್ತಿಯನ್ನು ಕ್ರೋಢೀಕರಿಸಲು ಸಹಾಯಕವಾಗಿವೆ

3. ಸಲ್ಕಿಯಾ ಪ್ಲೀನಮ್‌ನ ತೀರ್ಮಾನಗಳ ಆಧಾರದಲ್ಲಿ ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಕಟ್ಟುವ ನಿಟ್ಟಿನಲ್ಲಿ ನಾವು ಈ ಅನುಕೂಲಕರ ಪರಿಸ್ಥಿತಿಯನ್ನು ಗಮನಿಸಬೇಕು.

4. ಸಲ್ಕಿಯಾ ಪ್ಲೀನಮ್ ಮುಗಿದು ಬಂದನಂತರ ಅದರ ನಿರ್ದೇಶನಗಳನ್ನು ಜಾರಿಮಾಡಲು ರಾಜ್ಯಘಟಕವು ಪ್ರಾಮಾಣಿಕವಾಗಿ ಪ್ರಯತ್ನಿಸಿದೆ. ಪಕ್ಷದ ಸದಸ್ಯರೇ ಇಲ್ಲದಿದ್ದ ಜಿಲ್ಲೆಗಳಿಗೆ ಪಕ್ಷವು ಮುನ್ನುಗ್ಗುವುದು ಅನುಕೂಲಕರವಾದ ಬೆಳವಣಿಗೆಯಾಗಿದೆ. ಇದೇ ರೀತಿ, ಪಕ್ಷವು ಸಂಘಟನಾತ್ಮಕವಾಗಿ ಹೆಚ್ಚುಕಡಿಮೆ ನಿರ್ಜೀವವಾಗಿದ್ದ ಪ್ರದೇಶಗಳಲ್ಲಿ ಪಕ್ಷದ ಶಾಖೆಗಳ ಸಂಖ್ಯೆಗಳು ಹೆಚ್ಚುವುದೂ ಅನುಕೂಲಕರವಾದ ಬೆಳವಣಿಗೆಯಾಗಿದೆ. ವಾರ್ಷಿಕ ಪರಿಶೀಲನೆಯಂತಹ ಕ್ರಮಗಳ ಮೂಲಕ ಪಾರ್ಟಿ ಸಂಘಟನೆಯನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ರಾಜ್ಯಸಮಿತಿಯು ಮಾಡಿದ ಪ್ರಯತ್ನಗಳೂ ಪಕ್ಷದ ಸಂಘಟನೆಯನ್ನು ಕ್ರೋಢೀಕರಿಸಲು ಸಹಾಯಕವಾಗಿವೆ. ಇವೆಲ್ಲದರ ಪರಿಣಾಮವಾಗಿ ಬೆಳವಣಿಗೆಯೂ ಕ್ರೋಢೀಕರಣವೂ ಒಂದು ಸೀಮಿತ ಪ್ರಮಾಣದಲ್ಲಿ ನಡೆದಿವೆ. ಈ ಕೆಲಸವನ್ನು ಚುರುಕುಗೊಳಿಸಬೇಕಾಗಿದೆ.

5. ಪಾರ್ಟಿ ಸಂಘಟನೆಯನ್ನು ವಿಸ್ತರಿಸುವ ಮತ್ತು ಕ್ರೋಢೀಕರಿಸುವ ಕೆಲಸವನ್ನು ಕೈಗೊಳ್ಳುವ ಸಂದರ್ಭದಲ್ಲಿ, ಹಿಂದಿನ ದಿನಗಳ ಹೆಮ್ಮೆಯ ಘಟನೆಗಳನ್ನೂ, ಹಿರಿಯ ಮುಂದಾಳುಗಳ ಅಗಾಧ ಅನುಭವಗಳನ್ನೂ ಪಕ್ಷವು ಗುರುತಿಸಿಕೊಳ್ಳಬೇಕು. ಇದರ ಜತೆಗೇ ಸಂಘಟನೆಯ ವಿಸ್ತರಣೆಯ ಮೂಲಕ ಪಕ್ಷವು ಪಡೆದ ಹೊಸ ಸಂಗಾತಿಗಳ ಕುರಿತೂ ಹೆಮ್ಮೆಪಡಬೇಕು. ನಮ್ಮ ಕೆಲಸಗಳನ್ನು ಸ್ವಯಂ ಟೀಕೆಯ ಮೂಲಕ ವಿಮರ್ಶಿಸುವಾಗ, ಹಿಂದಿನ ಸಾಧನೆಗಳನ್ನು ಕಡೆಗಣಿಸುವ ಪ್ರವೃತ್ತಿಯನ್ನು ತಡೆಯಬೇಕು. ಇದೇ ವೇಳೆಗೆ, ಅಸಮರ್ಪಕ ಕಾರ್ಯವಿಧಾನಗಳಿಂದಾಗಿ ಉದ್ಭವಿಸಿದ ಸಂಘಟನಾ ನ್ಯೂನತೆಗಳನ್ನು ಸ್ವಯಂ ಟೀಕೆಯ ಮೂಲಕ ವಿಮರ್ಶಿಸುವಾಗ, ಹೊಸ ನಿಷ್ಠಾವಂತ ಕಾರ್ಯಕರ್ತರ ಪ್ರವೇಶದಿಂದಾಗಿ ಪಕ್ಷವು ಗಳಿಸಿದ ಗಣನೀಯ ಸಾಧನೆಗಳನ್ನು ಗಮನದಲ್ಲಿಡಬೇಕು.

6. ವಿಸ್ತರಣೆಯನ್ನು ಕೈಗೊಂಡಾಗ ಪಕ್ಷಕ್ಕೆ ಹೊಸ ಕಾರ್ಯಕರ್ತರು ಬಂದರು. ಇವರು ಮುಖ್ಯವಾಗಿ ಮಾರ್ಕ್ಸ್‌ವಾದದ ಉನ್ನತ ಆದರ್ಶಗಳ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧೋರಣೆಗಳ ಕಡೆಗೆ ಆಕರ್ಷಿತರಾಗಿ ಬಂದರು. ಆದರೂ ಅವರಿಗೆ ಮಾರ್ಗದರ್ಶನವನ್ನೂ, ಪಾರ್ಟಿ ಶಿಕ್ಷಣವನ್ನೂ ಕೊಟ್ಟು ಅವರನ್ನು ಕಾರ್ಮಿಕವರ್ಗದ ಕ್ರಾಂತಿಕಾರಿಗಳನ್ನಾಗಿ ರೂಪಿಸಬೇಕು. ವಿಸ್ತರಣೆಯ ಮೂಲಕ ಪಕ್ಷಕ್ಕೆ ಬರುವ ಹೊಸ ಕಾರ್ಯಕರ್ತರಿಗೆ ಸರಿಯಾದ ಸಂಘಟನಾ ವಿಧಾನಗಳನ್ನು ಕಲಿಸುವ ಕೆಲಸವನ್ನು ಪಕ್ಷವು ಕೈಗೊಳ್ಳಬೇಕಾಗಿದೆ. ಈ ವಿಷಯಕ್ಕೆ ಬೇಕಾದಷ್ಟು ಗಮನಕೊಡದಿದ್ದರೆ ಹೊಸ ಕಾರ್ಯಕರ್ತರು ಸರಿಯಾದ ರೀತಿಯಲ್ಲಿ ಕೆಲಸ ಮಾಡದಂತಹ ತಪ್ಪುಗಳಿಗೆ ನಾವು ಅವಕಾಶಮಾಡಿಕೊಟ್ಟಂತಾಗಬಹುದು. ಹೊಸ ಕಾರ್ಯಕರ್ತರಿಗೆ ಸರಿಯಾದ ಶಿಕ್ಷಣವನ್ನು ಒದಗಿಸುವುದರ ಜತೆಗೇ ಹಿರಿಯ ಸಂಗಾತಿಗಳನ್ನೂ ಒಳಗೊಂಡಂತೆ ಸಮಗ್ರವಾಗಿ ಪಕ್ಷವನ್ನು ಸಲ್ಕಿಯಾ ಪ್ಲೀನಮ್ ವರದಿ ಮತ್ತು ಗೊತ್ತುವಳಿಯ ಆಧಾರದಲ್ಲಿ ಮುನ್ನಡೆಸಬೇಕಾಗಿದೆ.

7. 1964ರಲ್ಲಿ ಪಕ್ಷದ ವಿಭಜನೆಯಾದಾಗ ಅದರ ಪರಿಣಾಮವು ಇಡೀ ರಾಜ್ಯದಲ್ಲಿ ಒಂದೇ ರೀತಿಯಲ್ಲಿ ಇರಲಿಲ್ಲ. ಪರಿಷ್ಕರಣವಾದದ ವಿರುದ್ಧದ ಪ್ರಚಾರಗಳು ರಾಜ್ಯದ ಪಕ್ಷದಲ್ಲೂ ನಡೆದಿದ್ದವು. ಆದರೆ ಈ ಪ್ರಚಾರ ಮಾತ್ರದಿಂದಲೇ ಎಲ್ಲಾ ಪ್ರಮುಖ ಸಾಮೂಹಿಕ ಸಂಘಟನೆಗಳನ್ನು ಪಕ್ಷದೊಂದಿಗೆ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1964-71ರ ಅವಧಿಯಲ್ಲಿ ಸಾಮೂಹಿಕ ಚಳುವಳಿಗಳು ಬೆಳೆದಿವೆ. ಸಂಘಟನಾತ್ಮಕವಾಗಿ ಆ ಜಿಲ್ಲೆಯು ಈಗ ಪ್ರಬಲವಾಗಿರಲು ಇದೇ ಮುಖ್ಯ ಕಾರಣ. ಇನ್ನು ಕೆಲವೆಡೆಗಳಲ್ಲಿ ಸಾಮೂಹಿಕ ಸಂಘಟನೆಗಳು ಮತ್ತು ಚಟುವಟಿಕೆಗಳು ಇದ್ದವಾದರೂ, ನಮ್ಮ ನಿಶ್ಶಕ್ತಿಯಿಂದಾಗಿ ಪಾರ್ಟಿಯನ್ನು ಬೆಳೆಸುವುದಾಗಿಲ್ಲ. ತುಲನಾತ್ಮಕವಾಗಿ ಹೇಳುವುದಿದ್ದರೆ ಬೆಂಗಳೂರು ಮತ್ತು ಔದ್ಯಮಿಕವಾಗಿ ಬೆಳವಣಿಗೆ ಹೊಂದಿದ ಇತರ ಪ್ರದೇಶಗಳಲ್ಲಿ ಈ ಸಮಯದಲ್ಲಿ ಸಾಮೂಹಿಕ ಸಂಘಟನೆಗಳನ್ನು ನಮ್ಮ ಪಕ್ಷವು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. 1977ರ ನಂತರ ಈ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿದೆ.

ಕೆ.ಜಿ.ಎಫ್.ನಲ್ಲಿ ಪಕ್ಷವು ಸೈದ್ಧಾಂತಿಕವಾಗಿ ಮಾರ್ಕ್ಸ್‌ವಾದಿ ವಿರೋಧಿ ಸಿದ್ಧಾಂತವನ್ನು ಹಾಗೂ ದೈಹಿಕವಾಗಿ ನಡೆಯುತ್ತಿದ್ದ ಧಾಳಿಗಳನ್ನು ಎದುರಿಸಬೇಕಾಗಿ ಬಂತು. ಹೀಗಾಗಿ ನಮ್ಮ ಹಿಂದಿನ ಪ್ರಭಾವವನ್ನು ಉಳಿಸಿಕೊಳ್ಳುವುದು ಆಗಲಿಲ್ಲ. ಮತ್ತೆ ಇದೀಗ ಅಲ್ಲಿ ಪರಿಸ್ಥಿತಿ ಸುಧಾರಣೆಯಾಗುತ್ತಲಿವೆ

ಒಟ್ಟಿನಲ್ಲಿ ಹೇಳುವುದಿದ್ದರೆ 1964 ರಲ್ಲಿ ಪಕ್ಷದ ವಿಭಜನೆಯಾದ ಮೇಲೆ ದ.ಕ. ಜಿಲ್ಲೆಯೊಂದನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಪಕ್ಷವು ಅಷ್ಟಾಗಿ ಮುನ್ನಡೆಯನ್ನು ಸಾಧಿಸುವುದು ಆಗಿಲ್ಲ.

8. 1971ರಿಂದೀಚೆಗೆ ರಾಜ್ಯ ನಾಯಕತ್ವದ ಮುಖ್ಯ ವಿಭಾಗವು ಸೈದ್ಧಾಂತಿಕ ಗೊಂದಲ ಮತ್ತು ತಪ್ಪು ಧೋರಣೆಗಳ ಮೂಲಕ ಪಕ್ಷವನ್ನು ತಪ್ಪು ಹಾದಿಯಲ್ಲಿ ಕೊಂಡೊಯ್ದು ಹೋಯಿತು.

9. 1972-73ರ ಅವಧಿಯಲ್ಲಿ ರಾಜ್ಯಸಮಿತಿಯು ಸಾಮೂಹಿಕವಾಗಿ ಕೆಲಸ ಮಾಡುವುದು ನಿಲ್ಲುವ ಪರಿಸ್ಥಿತಿ ಬಂತು. ಇದರೊಂದಿಗೆ ನಾಯಕತ್ವದ ಮುಖ್ಯ ವಿಭಾಗವು ಅನುಸರಿಸಿದ ಅಧಿಕಾರಶಾಹಿತ್ವ, ಸ್ವತಂತ್ರತಾಪ್ರವೃತ್ತಿ ಮತ್ತು ಸಂಘಟನೆಯಲ್ಲಿದ್ದ ಪಂಥವಾದಿ ದೋಷಗಳು ತಪ್ಪುದಾರಿಗೆ ಹೋಗುವುದನ್ನು ತಡೆಯುವುದಕ್ಕೆ ಅಡ್ಡಿ ಮಾಡಿದವು.

10. 1971-73ರ ಅವಧಿಯಲ್ಲಿ ಪಕ್ಷದ ನಾಯಕತ್ವದಲ್ಲುಂಟಾದ ಬಿಕ್ಕಟ್ಟಿನ ಪರಿಣಾಮವಾಗಿ 1973ರಲ್ಲಿ ಪೊಲಿಟ್‌ಬ್ಯೂರೋವು ಮಧ್ಯಪ್ರವೇಶಿಸಿ ಬೆಂಗಳೂರಿನ ಪಾರ್ಟಿ ಸದಸ್ಯರಿಗೆ ಒಂದು ಪತ್ರ ಬರೆಯುವಂತಾಯಿತು. ಮುಖಂಡತ್ವದಲ್ಲಿದ್ದ ಸಂಘಟನಾ ನಿಶ್ಶಕ್ತಿಯ ಬಗ್ಗೆ ಈ ಪತ್ರದಲ್ಲಿ ವಿಮರ್ಶಿಸಲಾಗಿತ್ತು. ಇದಾದ ಮೇಲೆಯೂ ಆಗಿನ ಮುಖಂಡತ್ವವು ತನ್ನ ತಪ್ಪುಗಳನ್ನು ತಿದ್ದಿಕೊಂಡು, ಕೆಲಸ ಕಾರ್ಯಗಳನ್ನು ಸುಧಾರಿಸಲಿಲ್ಲ.

11. ರಾಜ್ಯದಲ್ಲಿ ತಪ್ಪುದಾರಿ ಹಿಡಿದಿದ್ದ ನಾಯಕತ್ವವನ್ನು ಸರಿಪಡಿಸಲು ಪಕ್ಷದೊಳಗಿನ ಹೋರಾಟ ಮುಂದುವರೆದು, 1978ರಲ್ಲಿ ಪೊಲಿಟ್‌ಬ್ಯೂರೋ ಮಧ್ಯಪ್ರವೇಶಿಸಿ ಪಕ್ಷದ ರಾಜ್ಯಸಮಿತಿಯನ್ನು ಪುನರ್‌ಸಂಘಟಿಸಲಾಯಿತು.

12. ಪಕ್ಷದಿಂದ ಕೆಲವು ಮಂದಿಯನ್ನು ಉಚ್ಚಾಟಿಸಿದ ಸಮಯದಲ್ಲಿ, ನಮ್ಮ ಪಕ್ಷದ ಸರಿಯಾದ ಧೋರಣೆಗಳ ಫಲವಾಗಿ ಪಕ್ಷವು ಭದ್ರವಾಗಿಯೇ ಉಳಿಯಿತು; ಪಾರ್ಟಿ ಸದಸ್ಯತ್ವವು ಸಮಗ್ರವಾಗಿ ನಮ್ಮ ಕೇಂದ್ರ ನಾಯಕತ್ವದೊಂದಿಗೆ ನಿಂತು ರಾಜ್ಯದ ಹೊಸ ನಾಯಕತ್ವವನ್ನು ಬೆಂಬಲಿಸಿತು.

13. ರಾಜ್ಯಸಮಿತಿಯು ಪುನರ್‌ಸಂಘಟನೆಯಾದ ಕೂಡಲೇ ಪಕ್ಷವನ್ನು ಚುರುಕುಗೊಳಿಸಿ, ಪಕ್ಷದ 10ನೇ ಅಧಿವೇಶನದಲ್ಲಿ ಅಂಗೀಕರಿಸಲಾದ ರಾಜಕೀಯ ಗೊತ್ತುವಳಿಯನ್ನು ಜಾರಿ ಮಾಡಲು ಕ್ರಮಕೈಗೊಳ್ಳಲಾಯಿತು ಇದರ ನಂತರ ಸಲ್ಕಿಯಾ ಪ್ಲೀನಮ್ ಜರಗಿ, ಅಲ್ಲಿ ಅಂಗೀಕರಿಸಲಾದ ಹೊಸ ಸಂಘಟನಾ ಧೋರಣೆಯು ರಾಜ್ಯದ ಘಟಕವನ್ನು ಬೆಳೆಸುವಲ್ಲಿ ಸಹಾಯಕವಾಯಿತು.

14. ಸಂಘಟನೆಯ ವಿಷಯದಲ್ಲಿ ಪಕ್ಷವು ತನ್ನ ಪಂಥವಾದ (Sectarian Views) ವನ್ನು ತೊರೆಯಬೇಕೆಂಬ ಅಂಶವನ್ನು ಸಲ್ಕಿಯಾ ಪ್ಲೀನಮ್ ಸರಿಯಾಗಿಯೇ ಗುರುತಿಸಿದೆ. ಈ ಅಂಶವು ಸಂಘಟನಾ ಗೊತ್ತುವಳಿಯಲ್ಲಿ ಅಡಕವಾಗಿದೆ

15. 10ನೇ ಅಧಿವೇಶನದ ರಾಜಕೀಯ ಗೊತ್ತುವಳಿಯನ್ನು ಜಾರಿ ಮಾಡಲು ಪಕ್ಷವನ್ನು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನಾಗಿ ಬೆಳೆಸಬೇಕೆಂಬ ಅಂಶವನ್ನು ಸಲ್ಕಿಯಾ ಪ್ಲೀನಮ್ ಸರಿಯಾಗಿ ಗುರುತಿಸಿದೆ. ಹೊಸ ಸಮರಶೀಲ ಸದಸ್ಯರನ್ನು ಸೇರಿಸಿಕೊಳ್ಳುವ ಮೂಲಕ ನಮ್ಮ ಪಕ್ಷವನ್ನು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನಾಗಿ ಬೆಳೆಸಲು ರಾಜ್ಯಸಮಿತಿಯು ಕ್ರಮಕೈಗೊಳ್ಳಬೇಕು.

16. ಬೇರೆ ಬೇರೆ ರಾಜ್ಯಗಳಲ್ಲಿ ಪಕ್ಷದ ಅಸಮಾನ ಬೆಳವಣಿಗೆಯಾಗಿರುವುದನ್ನು ಸಾಲ್ಕಿಯಾ ಪ್ಲೀನಮ್ ವರದಿಯು ಸರಿಯಾಗಿ ಗುರುತಿಸಿದೆ ಮತ್ತು ಇದೇ ಪರಿಸ್ಥಿತಿಯು ನಮ್ಮ ರಾಜ್ಯಮಟ್ಟದಲ್ಲಿಯೂ ಇದೆ. ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ ನಮ್ಮ ಅರ್ಧ ಸದಸ್ಯತ್ವ ಇದ್ದು, ಪ್ರತಿಯೊಂದು ಜಿಲ್ಲೆಯಲ್ಲಿಯೂ ಪಕ್ಷದ

ಬೆಳವಣಿಗೆಯಾಗುವಂತೆ ಶ್ರಮಿಸುವುದು ಬಹಳ ಅಗತ್ಯವಾಗಿದೆ.

17. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಕ್ಷವು ಸಾಕಷ್ಟು ಬೆಳೆದಿದ್ದರೂ ಕೂಡ, ಅದಿನ್ನೂ ಶಕ್ತಿಪೂರ್ಣವಾಗಬೇಕಾಗಿದೆ. ಇದಕ್ಕಾಗಿ ನಾವು ಪಕ್ಷದ ಸದಸ್ಯರನ್ನು ತರಬೇತುಗೊಳಿಸುವಂತಹ ಮತ್ತು ಪಕ್ಷವನ್ನು ಬೆಳೆಸುವಂತಹ ನಿರ್ದಿಷ್ಟ ಯೋಜನೆಯೊಂದನ್ನು ಹಾಕಿಕೊಳ್ಳುವುದು ಈಗ ಬಹಳ ಮುಖ್ಯವಾದ ಕೆಲಸವಾಗಿದೆ.

18. ಸಾಲ್ಕಿಯಾ ಪ್ಲೀನಮ್‌ನಲ್ಲಿ ಕೊಟ್ಟ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯಸಮಿತಿಯು ಸರಿಯಾದ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಲು ಸಾಧ್ಯವಾಗುವಂತೆ ತಕ್ಷಣವೇ ಈ ಕೆಳಗಿನ ಯೋಜನೆಗಳನ್ನು ಅನುಸರಿಸಬೇಕು :-

ಎ. ರಾಜ್ಯಸಮಿತಿಯ ಸದಸ್ಯರುಗಳೆಲ್ಲ ಪೂರ್ಣಾವಧಿ ಕಾರ್ಯಕರ್ತರಾಗಬೇಕು

ರಾಜ್ಯಸಮಿತಿಯ ಸದಸ್ಯರುಗಳಲ್ಲಿ ಎಷ್ಟು ಜನ ಪೂರ್ಣಾವಧಿ ಕಾರ್ಯಕರ್ತರಾಗಿರುವರೆಂಬುದರ ಬಗ್ಗೆ ಕೇಂದ್ರ ಸಮಿತಿಯು ಗಮನಕೊಡಬೇಕು. ಅವರೆಲ್ಲರೂ ಪೂರ್ಣಾವಧಿ ಕಾರ್ಯಕರ್ತರಾಗುವಂತೆ ಮತ್ತು ರಾಜ್ಯಸಮಿತಿಯ ನಿರ್ದೇಶನದಲ್ಲಿ ಎಲ್ಲ ಕೆಲಸಗಳಿಗೂ ಲಭ್ಯವಾಗುವಂತೆ ಮಾಡುವುದರ ಮೂಲಕ ರಾಜ್ಯಕೇಂದ್ರವನ್ನು ಬಲಪಡಿಸಬೇಕು,

ರಾಜ್ಯಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯರುಗಳೆಲ್ಲ ರಾಜ್ಯಮಟ್ಟದ ಕೆಲಸಗಳಿಗೆ ಲಭ್ಯವಾಗುವಂತೆ ಕೇಂದ್ರದಲ್ಲಿರಬೇಕು.

ವ್ಯವಸ್ಥಿತವಾಗಿ ಸಜ್ಜುಗೊಳಿಸಿದ ರಾಜ್ಯಸಮಿತಿ ಕೇಂದ್ರವನ್ನು ರೂಪಿಸಬೇಕು.

ಬಿ. ಕಡೇಪಕ್ಷ ಜಿಲ್ಲಾ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯರೆಲ್ಲ ಪೂರ್ಣಾವಧಿ ಕಾರ್ಯಕರ್ತರಾಗಬೇಕು

ಈಗ, ಎಷ್ಟು ಜನ ಜಿಲ್ಲಾ ಸಮಿತಿಯ ಸದಸ್ಯರು ಪೂರ್ಣಾವಧಿ ಕಾರ್ಯಕರ್ತರಾಗಿದ್ದಾರೆಂಬುದನ್ನು ತಿಳಿದುಕೊಂಡು, ಅವರೆಲ್ಲರೂ ಪೂರ್ಣಾವಧಿ ಕಾರ್ಯಕರ್ತರಾಗುವಂತೆ ಎಲ್ಲ ಪ್ರಯತ್ನಗಳನ್ನೂ ಮಾಡಬೇಕು, ಕೊನೇಪಕ್ಷ ಜಿಲ್ಲಾ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯರುಗಳೆಲ್ಲ ಪೂರ್ಣಾವಧಿ ಕಾರ್ಯಕರ್ತರಾಗಿ, ಜಿಲ್ಲಾ ಸಮಿತಿಯ ಸದಸ್ಯರು ಜಿಲ್ಲಾ ಸಮಿತಿಯ ನಿರ್ದೇಶನದಲ್ಲಿ ಕೆಲಸಮಾಡುವಂತಾಗಬೇಕು.

ಸಿ. ರಾಜ್ಯಸಮಿತಿಯು ಜಿಲ್ಲಾ ಸಮಿತಿಗಳ ಸಹಾಯಪಡೆದುಕೊಂಡು ಪ್ರತಿಯೊಂದು ಜಿಲ್ಲೆಯ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಬೇಕು.

ಡಿ. ರಾಜ್ಯಸಮಿತಿಯು ತೆಗೆದುಕೊಂಡ ತೀರ್ಮಾನಗಳನ್ನು ತಕ್ಷಣವೇ ಜಿಲ್ಲಾ ಸಮಿತಿಗಳಿಗೆ ತಿಳಿಸಬೇಕು. ಜಿಲ್ಲಾ ಸಮಿತಿಗಳು ತಾವು ರಾಜ್ಯಸಮಿತಿಯಿಂದ ವಿಚಾರ ತಿಳಿದಕೂಡಲೇ ಅದನ್ನು ಜಿಲ್ಲಾ ಸಮಿತಿಯ ಮುಂದಿಟ್ಟು ಚರ್ಚಿಸಿ, ಅದರ ವರದಿಯನ್ನು ತಕ್ಷಣವೇ ರಾಜ್ಯಸಮಿತಿಗೆ ಕಳುಹಿಸಬೇಕು. ರಾಜ್ಯಸಮಿತಿಯು ಸೆಕ್ರೆಟಾರಿಯೆಟ್, ಈ ವರದಿಯನ್ನು ಚರ್ಚಿಸಿ, ವಿಮರ್ಶಿಸಿ ಅದರ ವರದಿಯನ್ನು ಮತ್ತು ಮುಂದೆ ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳನ್ನು ರಾಜ್ಯಸಮಿತಿಯ ಮುಂದಿಡಬೇಕು.

ಇ. ರಾಜ್ಯಮಟ್ಟದ ಸಾಮೂಹಿಕ ಸಂಘಟನೆಗಳಿಗಾಗಿ ಸರಿಯಾದ ರಾಜ್ಯ ಕೇಂದ್ರಗಳ ವ್ಯವಸ್ಥೆಯಾಗುವಂತೆ ರಾಜ್ಯಸಮಿತಿಯು ನೋಡಿಕೊಳ್ಳಬೇಕು,

ಎಫ್. ಈ ಸಾಮೂಹಿಕ ಸಂಘಟನೆಗಳ ಕೇಂದ್ರದಿಂದ ವರದಿಗಳು ರಾಜ್ಯಸಮಿತಿಗೆ ಕ್ರಮವಾಗಿ ತಲುಪುವಂತೆ ರಾಜ್ಯಸಮಿತಿ ನೋಡಿಕೊಳ್ಳಬೇಕು.

ಜಿ. ರಾಜ್ಯಸಮಿತಿಯು ಪಕ್ಷದ ವಿದ್ಯಾಭ್ಯಾಸವನ್ನು ಕೊಡಲು ಒಂದು ಯೋಜನೆಯನ್ನು ತಯಾರಿಸಬೇಕು. ಒಂದು ಶಿಕ್ಷಣ ಇಲಾಖೆಯನ್ನು ರಚಿಸಬೇಕು.

ಹೆಚ್. ಸಾಹಿತ್ಯ, ಸಾಂಸ್ಕೃತಿಕ ಚಳುವಳಿ, ಸಾಕ್ಷರತಾ ಚಳುವಳಿ, ವಿದ್ಯಾರ್ಥಿಗಳ, ಯುವಜನರ ಮತ್ತು ಮಹಿಳೆಯರ ಚಳುವಳಿಗಳ ಬೆಳವಣಿಗೆಗಾಗಿ ರಾಜ್ಯಸಮಿತಿಯು ಒಂದು ನಿಶ್ಚಿತ ನಿಲುವನ್ನು ತಳೆದು, ಅದು ನಡೆಯಬೇಕಾದ ಹಾದಿಯ ಬಗ್ಗೆ ರೂಪರೇಷೆಯೊಂದನ್ನು ಹಾಕಿಕೊಳ್ಳಬೇಕು. ಈ ಎಲ್ಲಾ ಸಂಘಟನೆಗಳಿಗಾಗಿ ರಾಜ್ಯಮಟ್ಟದ ಫ್ರಾಕ್ಷನ್‌ಗಳನ್ನು ರಚಿಸಿಕೊಳ್ಳಬೇಕು.

ಐ. ಪಂಚಾಯತುಗಳಿಗೆ, ಪುರಸಭೆಗಳಿಗೆ, ಸೊಸೈಟಿಗಳಿಗೆ ಮತ್ತಿತರ ಸಂಘಸಂಸ್ಥೆಗಳಿಗೆ ಚುನಾಯಿತರಾಗಿರುವ ಪಕ್ಷದ ಸದಸ್ಯರ ಬಗ್ಗೆ ಸರಿಯಾದ ಮಾಹಿತಿ ರಾಜ್ಯಸಮಿತಿಗಿರಬೇಕು. ಅಂತಹ ಪ್ರದೇಶಗಳಲ್ಲಿ ಪಕ್ಷದ ಬೆಳವಣಿಗೆಯಾಗುವಂತೆ ಮಾಡಲು, ಮತ್ತು ಆಗುತ್ತಿರುವ ಕೆಲಸದ ಬಗ್ಗೆ ನಿಗಾ ಇಡಲು ರಾಜ್ಯಸಮಿತಿಯು ಯೋಜನೆಯೊಂದನ್ನು ಸಿದ್ಧಪಡಿಸಿಕೊಳ್ಳಬೇಕು,

ಜೆ. ರಾಜ್ಯಸಮಿತಿಯು ನಿಧಿ ಸಂಗ್ರಹಣೆಗಾಗಿ ಯೋಜನೆಯೊಂದನ್ನು ಹಾಕಿಕೊಳ್ಳಬೇಕು, ಇಲ್ಲದಿದ್ದರೆ ಮೇಲೆ ಹೇಳಿದ ಯಾವ ಕೆಲಸಗಳೂ ಸುಸೂತ್ರವಾಗಿ ನಡೆಯಲು ಸಾಧ್ಯವಾಗುವುದಿಲ್ಲ.

ಕೆ. ಇಡೀ ರಾಜ್ಯದಲ್ಲಿ, ಕಾರ್ಯಕರ್ತರ ಬೆಳವಣಿಗೆಗಾಗಿ ಯೋಜನೆಯೊಂದನ್ನು ರಾಜ್ಯಸಮಿತಿಯು ತಯಾರಿಸಬೇಕು, ಸೂಕ್ತ ಚರ್ಚೆ, ವಿಮರ್ಶೆಗಳ ನಂತರ ಇದನ್ನು ಜಾರಿಗೊಳಿಸಬೇಕು.

19. ರಾಜ್ಯಸಮಿತಿಯು ಆಗಿಂದಾಗ್ಗೆ ಸಭೆ ಸೇರಿ, ಯಾವ ಕೆಲಸಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂಬುದನ್ನು ಮತ್ತು ಕೆಲಸವು ಸರಿಯಾಗಿ ಹಂಚಲ್ಪಡುತ್ತಿದೆಯೋ ಎಂಬುದನ್ನು ನೋಡಬೇಕು. ನಡೆಯುತ್ತಿರುವ ಕೆಲಸದ ವಿಮರ್ಶೆಯೂ ಆಗಬೇಕು. ಆಗಿಂದಾಗ್ಗೆ ನಡೆಯುವ ಸಾಮೂಹಿಕ ಹೋರಾಟಗಳ ಬಗ್ಗೆ ವಿಚಾರ ವಿಮರ್ಶೆ ನಡೆಸಿ, ಅದರ ವರದಿಯನ್ನು ಮೇಲಿನ ಹಾಗೂ ಕೆಳಗಿನ ಸಮಿತಿಗಳಿಗೆ ಮತ್ತು ಕೇಂದ್ರಕ್ಕೆ ನಿಯತವಾಗಿ ಕಳುಹಿಸಬೇಕು.

20. ರಾಜ್ಯಸಮಿತಿ ಮತ್ತು ಜಿಲ್ಲಾ ಸಮಿತಿಗಳು ಪಕ್ಷದ ವರ್ಗರಚನೆಯ ಬಗ್ಗೆ ಗಮನಕೊಡುತ್ತಿರಬೇಕು ಮತ್ತು ಸರಿಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಪಕ್ಷದ ಸದಸ್ಯತ್ವವು ಸಾಮೂಹಿಕ ಚಟುವಟಿಕೆಗಳನ್ನು ಪ್ರತಿಫಲಿಸುತ್ತಿರುವಂತೆ ಜಿಲ್ಲಾ ಸಮಿತಿಗಳು ನೋಡಿಕೊಳ್ಳಬೇಕು, ಸಾಮೂಹಿಕ ಚಟುವಟಿಕೆಗಳೊಂದಿಗೆ ಪಕ್ಷದ ಸದಸ್ಯತ್ವವು ಬೆಳೆಯಬೇಕು,

21. ಪ್ರತಿಯೊಂದು ಜಿಲ್ಲಾ ಸಮಿತಿಯೂ ಪ್ರತೀ ತಿಂಗಳು ಸಭೆ ಸೇರಿ, ಪಕ್ಷದ ಪತ್ರಿಕೆಗಳ ಪ್ರಸಾರದ ಕುರಿತು ಮತ್ತು ಅವುಗಳಲ್ಲಿ ಪ್ರಕಟವಾಗುವ ವರದಿಗಳು ಹಾಗೂ ಲೇಖನಗಳ ಕುರಿತು ಪರಿಶೀಲನೆ ನಡೆಸಿ ರಾಜ್ಯಸಮಿತಿಗೆ ವರದಿ ಕಳುಹಿಸಬೇಕು, ಈ ವರದಿಗಳನ್ನು ರಾಜ್ಯಸಮಿತಿಯು ಕ್ರಮಬದ್ಧವಾಗಿ ಪರಿಶೀಲಿಸಬೇಕು. ಪತ್ರಿಕೆಗೆ ವರದಿಗಳನ್ನು ಕಳುಹಿಸಲು ವರದಿಗಾರರನ್ನು ನೇಮಿಸಬೇಕು,

22. ಸಾಮೂಹಿಕ ನೇತೃತ್ವದಿಂದ ವರದಿಗಳನ್ನೊಪ್ಪಿಸಲು ಜಿಲ್ಲಾ ಸಮಿತಿಗಳು ಸರ್ವಸದಸ್ಯರ ಸಭೆಗಳನ್ನು ನಡೆಸುವ ವ್ಯವಸ್ಥೆ ಮಾಡಬೇಕು. ಸರ್ವಸದಸ್ಯರ ಸಭೆಗಳ ಕುರಿತು ಬಂದ ವರದಿಗಳನ್ನು ಜಿಲ್ಲಾ ಸಮಿತಿಯು ಆಗಿಂದಾಗ ಚರ್ಚಿಸಬೇಕು.

23. ರಾಜ್ಯಸಮಿತಿ ಮತ್ತು ಜಿಲ್ಲಾ ಸಮಿತಿಗಳು ಸಾಮೂಹಿಕ ಸಂಘಟನೆಗಳಲ್ಲಿ ಸೂಕ್ತವಾದ ಹಂತಗಳಲ್ಲಿ ಪಾರ್ಟಿಗುಂಪು (ಫ್ರಾಕ್ಷನ್) ಗಳನ್ನು ರಚಿಸಬೇಕು. ಈ ಗುಂಪುಗಳ ಚಟುವಟಿಕೆಗಳನ್ನು ಪರಿಶೀಲಿಸುತ್ತಿರಬೇಕು ಸಾಮೂಹಿಕ ಸಂಘಟನೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಈ ಗುಂಪುಗಳು ಸಂಬಂಧಪಟ್ಟ ಪಾರ್ಟಿ ಸಮಿತಿಗಳ ಗಮನಕ್ಕೆ ತರಬೇಕು,

24. ಪ್ರತಿ ವರ್ಷ ಎಲ್ಲಾ ಸದಸ್ಯರ ಕುರಿತು ಅವರ ಘಟಕಗಳಲ್ಲಿ ಪರಿಶೀಲನೆ ನಡೆಸಬೇಕು. ಕನಿಷ್ಠ ಕರ್ತವ್ಯಗಳನ್ನು ಎಲ್ಲಾ ಸದಸ್ಯರೂ ಪಾಲಿಸುವಂತೆ ನೋಡಿಕೊಳ್ಳಬೇಕು.

ವಾರ್ಷಿಕ ಪರಿಶೀಲನೆಯೆಂದರೆ ಪಾರ್ಟಿ ಸದಸ್ಯತನದ ವಿಸ್ತರಣೆಯನ್ನು ಕಡೆಗಟ್ಟಬೇಕೆಂಬ ಅರ್ಥವಲ್ಲ ಹಾಗೇನೇ, ವಿಸ್ತರಣೆ ಎಂದರೆ ಪಕ್ಷವನ್ನು ನಿರುಪಯುಕ್ತ ಜನರಿಗಾಗಿ ತೆರೆದಿಡುವುದೆಂಬ ಅರ್ಥವೂ ಅಲ್ಲ. ಹೆಚ್ಚು ಸದಸ್ಯರನ್ನು ಪಾರ್ಟಿಗೆ ತೆಗೆದುಕೊಳ್ಳುವುದು, ಅವರಿಗೆ ಶಿಕ್ಷಣ ಕೊಡುವುದು, ಅವರಲ್ಲಿ ಶಿಸ್ತು ಬೆಳೆಸುವುದು ಮತ್ತು ಇವುಗಳ ಮೂಲಕ ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷವನ್ನು ಬೆಳೆಸುವುದೇ ಇಂದಿನ ಅವಶ್ಯಕತೆ

25. ರಾಜ್ಯಸಮಿತಿಯು ನಮ್ಮ ರಾಜ್ಯದಲ್ಲಿ ಬೆಳೆದಿರುವ ಮಾರ್ಕ್ಸ್‌ವಾದಿ ವಿರೋಧಿ ಸಿದ್ಧಾಂತಗಳ ಬಗ್ಗೆ ಕೇಂದ್ರ ಸಮಿತಿಯ ಜೊತೆ ಚರ್ಚಿಸಬೇಕು ಹಾಗೂ ಅವರ ಸಹಾಯದಿಂದ ಅಂಥ ಸಿದ್ಧಾಂತಗಳ ವಿರುದ್ಧ ಹೋರಾಟ ನಡೆಸಬೇಕು.

26. ಪಕ್ಷದ ಬೆಳವಣಿಗೆಗಾಗಿ ರಾಜ್ಯಸಮಿತಿ ರಾಜ್ಯಮಟ್ಟದ ರಾಜಕೀಯ ಪ್ರಚಾರ, ಪ್ರಕ್ಷೋಭೆಗಳನ್ನು ಕಾಲಕಾಲಕ್ಕೆ ನಡೆಸಬೇಕು,

27. ಕಾರ್ಯಕರ್ತರಿಗೆ ಪಕ್ಷದ ಸಂಘಟನಾ ನಿಯಮಗಳನ್ನು ತಿಳಿಯಪಡಿಸುವುದಕ್ಕೆ ತುರ್ತು ಗಮನ ನೀಡಬೇಕು. ಕಾಮ್ರೇಡುಗಳಿಗೆ ಸ್ವಂತ ಅಭ್ಯಾಸ ಮಾಡುವುದಕ್ಕೆ ಹಾಗೂ ಕನ್ನಡ ಮತ್ತಿತರ ಭಾಷೆಗಳಲ್ಲಿ ಪುಸ್ತಕಗಳು ಲಭ್ಯ ಆಗುವಂತೆ ಮಾಡುವುದಕ್ಕೆ ಎಲ್ಲಾ ಸಹಾಯ ಮಾಡಬೇಕು.

28. ರಾಜ್ಯಸಮಿತಿಯು ಪಕ್ಷದಲ್ಲಿ ನೌಕರಶಾಹಿ, ವೈಯಕ್ತಿಕವಾದ, ಆರ್ಥಿಕವಾದ, ಉದಾರವಾದ ಮತ್ತು ಸ್ಥಳೀಯತಾ ಸಂಕುಚಿತವಾದಗಳ ವಿರುದ್ಧ ಹೋರಾಡಲು ಕ್ರಮವಹಿಸಬೇಕು,

29. ಪ್ರತಿಯೊಂದು ಜಿಲ್ಲಾ ಸಮಿತಿಗಳು ಕನಿಷ್ಠ ತಿಂಗಳಿಗೊಮ್ಮೆ ಸೇರುವಂತೆ, ಸಾಮೂಹಿಕ ನಾಯಕತ್ವದಲ್ಲಿ ಕೆಲಸಮಾಡುವಂತೆ ಹಾಗೂ ರಾಜ್ಯ ಸಮಿತಿಗೆ ವರದಿ ಮಾಡುವಂತೆ ಮಾಡಲು ರಾಜ್ಯಸಮಿತಿ ಕ್ರಮವಹಿಸಬೇಕು.

30. ಜಿಲ್ಲಾ ಸೆಕ್ರೆಟಾರಿಯೆಟ್ ಸದಸ್ಯರು ಸಾಮಾನ್ಯವಾಗಿ ಸೇರಲು ಸಾಧ್ಯವಿರುವ ಸ್ಥಳದಲ್ಲಿ ಪ್ರತಿಯೊಂದು ಜಿಲ್ಲಾ ಸಮಿತಿಯು ಕೆಲಸಮಾಡುವ ಜಿಲ್ಲಾ ಕೇಂದ್ರಗಳನ್ನು ಹೊಂದಿರಬೇಕು. ಸೆಕ್ರೆಟಾರಿಯೆಟ್ ಸದಸ್ಯರು ದಿನನಿತ್ಯ ಸಂಪರ್ಕ ಇಟ್ಟುಕೊಂಡು ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಬೇಕು.

31. ರಾಜ್ಯಸಮಿತಿ / ಜಿಲ್ಲಾ ಸಮಿತಿಗಳು ಸಾಮಾಜಿಕವಾಗಿ ತುಳಿಯಲ್ಪಟ್ಟವರು, ಹಿಂದುಳಿದವರು, ಅಲ್ಪಸಂಖ್ಯಾತರು ಮಹಿಳೆಯರು ಮತ್ತಿತರ ಸಾಮಾಜಿಕ ಶೋಷಣೆಗಳಿಗೆ ಒಳಗಾದವರ ಸಮಸ್ಯೆಗಳತ್ತ ವಿಶೇಷ ಗಮನ ನೀಡಬೇಕು.

32. ಶಾಖಾ ಕಾರ್ಯದರ್ಶಿಗಳು ಸರಿಯಾದ ಸಂಘಟನಾ ನಿಯಮಗಳ ಬಗ್ಗೆ ತರಬೇತಿ ಪಡೆಯುವಂತೆ ಜಿಲ್ಲಾ ಸಮಿತಿಗಳು ನಿಗಾವಹಿಸಬೇಕು,

33. ಪಕ್ಷದ ಎಲ್ಲಾ ಘಟಕಗಳು ಸತತವಾಗಿ, ತಾವು ಪಕ್ಷದ ಸಂವಿಧಾನ ಮತ್ತು ಸಂಘಟನಾ ನಿಯಮಗಳನ್ನು ಪಾಲಿಸುತ್ತಿದ್ದೇವೆಯೋ ಇಲ್ಲವೋ ಎಂಬುದನ್ನು ವಿಮರ್ಶಿಸಬೇಕು.

●

ಪ್ಲೀನಮ್ ಯಶಸ್ವಿಗೊಳಿಸಲು ಶ್ರಮಿಸಿದವರಿಗೆ ಅಭಿನಂದನೆ

1980 ಡಿಸೆಂಬರ್ 24 ರಿಂದ 28ರ ತನಕ ಮೈಸೂರಿನಲ್ಲಿ ಪಕ್ಷದ ರಾಜ್ಯ ಪ್ಲೀನಮ್‌ನ್ನು ಯಶಸ್ವಿಗೊಳಿಸಲು ಶ್ರಮಿಸಿದ ಮತ್ತು ಸಹಾಯ ನೀಡಿದ ಪಕ್ಷದ ಸದಸ್ಯರಿಗೆ, ಹಿತೈಷಿಗಳಿಗೆ ಮತ್ತು ಗೆಳೆಯರೆಲ್ಲರಿಗೂ ಸಿ ಪಿ ಐ.(ಎಂ) ರಾಜ್ಯಸಮಿತಿಯು ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕಾಂ. ಎಮ್. ಎಸ್. ಉಗ್ರಪ್ಪ ಅಧ್ಯಕ್ಷರಾಗಿಯೂ, ಕಾಂ. ತಿಮ್ಮೇಗೌಡ ಖಜಾಂಚಿಯಾಗಿಯೂ ಇತರ ಹಲವಾರು ಸಂಗಾತಿಗಳಿಂದ ಮತ್ತು ಪಕ್ಷದ ಹಿತೈಷಿಗಳಿಂದ ಸೇರಿದ್ದ ಸ್ವಾಗತ ಸಮಿತಿಯ ಮತ್ತು ಸ್ವಯಂಸೇವಕರು ಬಹಳಷ್ಟು ಶ್ರಮಿಸಿರುವರು. ಇವರೆಲ್ಲರಿಗೂ ರಾಜ್ಯಸಮಿತಿಯು ತನ್ನ ಪ್ರತ್ಯೇಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಎಂ. ಕೆ. ಭಟ್
ಕಾರ್ಯದರ್ಶಿ, ಸಿ.ಪಿ ಐ.(ಎಂ) ರಾಜ್ಯಸಮಿತಿ

ಸ್ಟೈಫೆಂಡರಿ ಪದವೀಧರರ ಜಿಲ್ಲಾ ಸಮ್ಮೇಳನ

7-12-1980ರಂದು ಧಾರವಾಡದಲ್ಲಿ ಜಿಲ್ಲಾ ಮಟ್ಟದ ಸ್ಟೈಫಂಡರಿ ಪದವೀಧರರ ಸಮ್ಮೇಳನ ನಡೆಯಿತು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಬಹಿರಂಗ ಸಭೆ ಇವು ನಡೆದವು.

ಸಂಜೆ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಆರ್. ಜಿ. ಸ್ಥಳೇಕರ್ ವಹಿಸಿದ್ದರು. ಎ.ಐ ಎಸ್. ಎಫ್. ನ ಮೋಹನ್ ಹಿಪ್ಪರಗಿ, ಕೆ.ಎಸ್.ಎಸ್.ಇ.ಎ.ನ ಕೆ. ವಿ. ರಾಯಚೂರ, ಎ.ಐ ಬಿ.ಎ.ನ ರಾಮರಾವ್, ಸಿ.ಪಿ ಐ(ಎಂ)ನ ವಿ ಎಸ್. ಹಳಕಟ್ಟಿ, ಎ.ಎಲ್.ಸಿ.ಯ ಎಂ.ಕೆ. ದೇಶಪಾಂಡೆ, ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಆರ್. ಜಿ. ಸ್ಥಳೇಕರ್ ಅವರು ಸ್ಫೂರ್ತಿದಾಯಕ ಭಾಷಣ ಮಾಡಿದರು. ಮುಖ್ಯ ಬೇಡಿಕೆಗಳನ್ನುಳ್ಳ ಮನವಿ ಪತ್ರವನ್ನು ಜಿಲ್ಲಾ ಶಾಸಕರಿಗೆ ಅರ್ಪಿಸಲಾಯಿತು.

○

ಅಮರ ಕವಿ - ಸಾಹಿರ

(3ನೇ ಪುಟದಿಂದ)

ಸಮಾಜ ಕೊ ಬದಲ ಡಾಲೊ
ಜುಲ್ಮ ಔರ ಲೂಟ ಕೆ ರಿವಾಜ ಕೊ
ಬದಲ ಡಾಲೊ
ಕಿತನೆ ಘರ ಹೈಂ ಇವಮೆ ಆಜ
ರೋಶನಿ ನಹೀಂ
ಕಿತನೆ ತನ ಬದನ ಹೈ ಜಿನಮೆ
ಜಿಂದಗಿ ನಹಿಂ
ಜುಲ್ಮ ಔರ ಗೌವು ಕೆ ವಿ.ಜಾಜ
ಕೊ ಬದಲ ಡಾಲೊ
ಸೈಕಡೊಂ ಕಿ ಮೆಹನತ ಪರ
ಏಕ ಕಾಬ್ಜಾ ಪಲೆ
ಆಜ ಹೈ ಯುಹಿ ತೊ ಐಸೆ
ಆಜ ಕೊ ಬದಲ ಡಾಲೊ

[ಶೋಷಣೆ, ಅನ್ಯಾಯಗಳ ಆಗರವಾಗಿರುವ ಈ ಸಮಾಜವನ್ನು ಬದಲಾಯಿಸಿ. ಕತ್ತಲೆಯಲ್ಲಿ ಮುಳುಗಿರುವ ಸಹಸ್ರಾರು ಗುಡಿಸಲುಗಳಿದ್ದಂತಹ, ಇದ್ದೂ ಸತ್ತಂತಿರುವ ಮನುಷ್ಯರಿರುವ ಈ ಸಮಾಜವನ್ನು ಬದಲಾಯಿಸಿ. ವಿಧ್ವಂಸಕದಲ್ಲಿ ಮುಳುಗಿರುವ ಈ ನಾರುತ್ತಿರುವ ಸಮಾಜವನ್ನು ಬದಲಾಯಿಸಿ, ಸಹಸ್ರ ಸಹಸ್ರ ಜನರ ಶ್ರಮದಿಂದ ಒಬ್ಬನ ವೈಭವವೇಕೆ? ಇಂದು ಈ ಪದ್ಧತಿಯೇ ಇರುವುದಾದಲ್ಲಿ ಇದನ್ನೇ ಕಿತ್ತು ಬಿಸಾಕಿ]

ಸಾಹಿರ ಮುಂದುವರಿದು ಅನ್ನುತ್ತಾರೆ.

ಆಜಸೆ ಮೈ ಅಪನೆ ಗೀತೊಂ ಮೆ
ಆತಿಶ ಭರದೂಂಗಾ ಮದ್ಧಮ ಲಚ
ಕೀಲಿ ತಾನೊಂಮೆ
ಜೀವನ ಧಾರೆ ಭರ ದೂಂಗಾ
ಆಜಸೆ ಏ ಮಜದೂರ ಕಿಸಾನೊ
ಮೇರೆ ರಾಗ ತುಮ್ಹಾರೆ ಹೈ
ಫಾಕಾಕಶ ಇನಸಾನೋಂ
ಮೇರೆ ಜೋಗ ಬಿಹಾಗ ತುಮ್ಹಾರೆ ಹೈ

[ಇಂದಿನಿಂದ ನಾನು ಗೀತೆಗಳ ರೂಪದಲ್ಲಿ ಬೆಂಕಿಯನ್ನುಗುಳುತ್ತೇನೆ, ಉದಾಸೀನತೆಯಲ್ಲಿ ಜೀವರಸ ತುಂಬುತ್ತೇನೆ, ರೈತಕಾರ್ಮಿಕರೆ, ಇಂದಿನಿಂದ ನನ್ನ ಗೀತೆಗಳು ಕೇವಲ ನಿಮಗಾಗಿ, ತುಳಿಯಲ್ಪಟ್ಟಿರುವ ಜನಗಳೇ ನನ್ನ ಸರ್ವಸ್ವವೂ ನಿಮ್ಮದೇ]

ಸಾಹಿರ "ಕಮ್ಯುನಿಸ್ಟ" ಎಂದೆನ್ನಿಸಿಕೊಂಡರು. ಅವರು ಹೆಜ್ಜೆಹೆಜ್ಜೆಗೆ ಜನತೆಯ ಸಂಕಷ್ಟವನ್ನು ವ್ಯಕ್ತಪಡಿಸಿದರು.

ಮಹಾಕವಿ ಇಕ್ಬಾಲ್‌ರು ನಮ್ಮ ದೇಶವನ್ನು ಹೊಗಳಿ ಹಾಡಿದರು. ಸಾಹಿರ್ ಇದೇ ದೇಶದ ಇನ್ನೊಂದು ಮುಖವನ್ನು ಈ ರೀತಿ ವ್ಯಂಗ್ಯವಾಗಿ ಬಣ್ಣಿಸುತ್ತಾರೆ.

ಚೀನೊ ಅರಬ ಹಮಾರಾ
ಹಿಂದೊಸ್ತಾಂ ಹಮಾರಾ
ರಹನೆ ಕೋ ಘರ ನಹಿ ಹೈ
ಸಾರಾ ಜಹಾಂ ಹಮಾರಾ

[ಚೀನ, ಅರಬಸ್ತಾನಗಳು ನಮ್ಮವೇ ಆಗಿವೆ, ಆದರೆ ಈ ದೇಶದಲ್ಲಿ ವಾಸಿಸಲು ಗುಡಿಸಲುಗಳಿಲ್ಲವಾದರೂ ವಿಶ್ವವೇ ನಮ್ಮದು]

ಅವರು ಮುಂದುವರಿದು ಹಾಡಿದರು.

ಖೋಲಿ ಭಿ ಛೀನ ಗಯಿ
ಬೆಂಚ ಭಿ ಛೀನ ಗಯಿ ಹೈ
ಫುಟಪಾಥ ಬಂಬಯಿ ಕೆ ಹೈಂ
ಆಶಿಯಾಂ ಹಮಾರಾ
ಜಿತನೀ ಭಿ ಬಿಲ್ಡಿಂಗೆ ಥಿ
ಸೇಠೋ ನೆ ಬಾಟಲಿ ಹೈ
ಸಡಕೊಂ ಪರ ಘೂಮತಾ ಹೈಂ
ಅಬ ಕಾರವಾಂ ಹಮಾರಾ

[ವಾಸಿಸುವ ಸ್ಥಳಗಳೂ, ಚರಾಸ್ತಿಗಳೂ ದೋಚಲ್ಪಟ್ಟಿವೆ. ನಗರಗಳ ರಸ್ತೆಯ ಬದಿಗಳು ಲಕ್ಷಾಂತರ ಜನರ ಆಶ್ರಯ ಸ್ಥಾನಗಳಾಗಿವೆ, ಇರುವ ಸ್ವತ್ತು ಕೇವಲ ಶ್ರೀಮಂತರದಾಗಿದೆ. ನಾವು ಕೇವಲ ಅಲೆಮಾರಿಗಳು ಮಾತ್ರ]

ಸಾಹಿರ ಮುಂದುವರಿದು ಹಾಡುತ್ತಾರೆ.

ಯೆ ದುನಿಯಾ ದೋರಂಗಿ ಹೈ
ಏಕ ತರಫಸೆ ರೇಶಮ ಓಡೆ
ಏಕ ತರಫ ಸೆ ನಂಗಿ ಹೈ
ಏಕ ತರಫ ಅಂಧಿ ದೌಲತ ಕಿ
ಪಾಗಲ ಐಶ ಪರಸ್ತಿ
ಏಕ ತರಫ ಜಿಸ್ಮೋಂ ಕಿ ಕಿಮತ
ರೋಟಿ ಸೆ ಭಿ ಸಸ್ತಿ ಹೈ
ಏಕ ತರಫ ಹೈ ಸೋನಾ ಚಾಂದಿ
ಏಕ ತರಫ ಚೌರಂಗಿ ಹೈ

[ಈ ಜಗತ್ತು ಎರಡು ಮುಖಗಳನ್ನೊಳಗೊಂಡಿದೆ. ಒಂದು ಕಡೆ ಸಂಪತ್ತು ಸಮೃದ್ಧಿಯಿದೆ. ಇನ್ನೊಂದೆಡೆ ಹಸಿವು ತಾಂಡವವಾಡುತ್ತಿದೆ ಒಂದೆಡೆ ಹುಚ್ಚು ದರ್ಬಾರದ ಅಟ್ಟಹಾಸವಿದ್ದರೆ ಇನ್ನೊಂದೆಡೆ ಮನುಷ್ಯನ ಬೆಲೆ ಒಂದು ರೊಟ್ಟಿಗಿಂತಲೂ ಕಡಿಮೆಯಿದೆ]

ಜಗತ್ತಿನ ಕಡೆಗೆ ಸಾಹಿರ ಹೀಗೆ ನೋಡಿದರು.

ಯಹಾಂ ಏಕ ಖಿಲೋನಾ ಹೈ
ಇನ್ಸಾನ ಕಿ ಹಸ್ತಿ
ಯಹ ಬಸ್ತಿ ಹೈ ಮುರ್ದಾ
ಪರಸ್ತೋಂ ಕಿ ಬಸ್ತಿ
ಯಹಾಂ ಪರ ತೊ ಜೀವನ ಸೆ
ಹೈ ಮೌತ ಸಸ್ತಿ
ಯೆ ದುನಿಯಾ ಅಗರ ಮಿಲ್ ಭಿ
ಜಾಯೆ ತೊ ಕ್ಯಾ ಹೈ

[ಮನುಷ್ಯ ಪ್ರಭುತ್ವದ ಆಟದ ಗೊಂಬೆಯಾಗಿದ್ದಾನೆ, ಇದು ಸತ್ತವರನ್ನು ಪೂಜಿಸುವ ಸ್ಥಳವಾಗಿದೆ ಇಲ್ಲಿ ಜೀವಕ್ಕಿಂತಲೂ ಸಾವು ಅಗ್ಗವಾಗಿದೆ. ಇಂಥ ಜಗತ್ತು ಕೈವಶವಾದರೂ ಏನು ಪ್ರಯೋಜನ?]

ಮುಂದುವರಿದು ಸಾಹಿರ ಈ ಸ್ವಪ್ನವನ್ನು ಕಾಣುತ್ತಾರೆ "ಆ ಮುಂಜಾವು ಎಂದಾದರೂ ಬರುತ್ತದೆ" ಎಂದು ಆಶೆ ತಾಳುತ್ತಾರೆ.

ದೌಲತ ಕೆ ಲಿಯೆ ಜಬ ಔರತ ಕಿ
ಇಸ್ಮತ ಕೊ ನ ಬೇಚಾ ಜಾಯೆಗಾ
ಚಾಹತ ಕೋ ನ ಕುಚಲಾ ಜಾಯೆಗಾ
ಗೈರತ ಕೋ ನ ಬೇಚಾ ಜಾಯೆಗಾ
ಅಪನಿ ಕಾಲಿ ಕರತೂತೊಂ ಪರ
ಜಬ ಯೆ ದುನಿಯಾ ಶರಮಾಯೆಗಿ
ಫಾಕೊಂ ಕಿ ಚಿತಾವೊಂ ಪರ ಜಿಸ
ದಿನ

ಇನ್ಸಾನ ಜಲಾಯೆ ನ ಜಾಯೆಂಗೆ
ಸೀನೊಂ ಕೆ ದಹಕತೆ ದೋಜಖ ಮೆ
ಅರಮಾ ನ ಜಲಾಯೆ ನ ಜಾಯೆಂಗೆ
ಯಹ ನರಕ ಸೆ ಭಿ ಗಂದಿ ದುನಿಯಾ
ಜಬ ಸ್ವರ್ಗ ಬನಾಯಿ ಜಾಯೆಗಿ
ವೊ ಸುಬಹ ಕಭಿ ತೊ ಆಯೇಗಿ.

[ಹಣಕ್ಕಾಗಿ ಮಹಿಳೆಯನ್ನು ವಿಕ್ರಯಿಸಲಾಗದ ಪ್ರೀತಿ-ವಿಶ್ವಾಸಗಳನ್ನು ತುಳಿಯಲಾಗದ ಆತ್ಮಗೌರವ ಮಾರಿಕೊಳ್ಳುವ ಪರಿಸ್ಥಿತಿ ಇರದಂಥ ಹಸಿವಿನ ಚಿತೆಯ ಮೇಲೆ ಮನುಷ್ಯ ಸ್ವಯಂ ಬೇಯುತ್ತಿರುವ ಪರಿಸ್ಥಿತಿ ಇಲ್ಲದಂತ ನರಕಕ್ಕಿಂತಲೂ ಭೀಕರವಾಗಿರುವ ಈ ಜಗತ್ತು ಖಂಡ ಸ್ವರ್ಗವಾಗುತ್ತದೆ. ಆ "ಮುಂಜಾವು"ವಿನ ಆಗಮನ ಶತಃಸಿದ್ಧ.]

ಮುಂದೆ ಅವರು ಅನ್ನುತ್ತಾರೆ.

ಹಕ ಮಾಂಗನೆವಾಲೊಂ ಕೊ ಜಿಸ ದಿನ
ಸೂಲಿ ನ ದಿಖಾಯಿ ಜಾಯೆಗಿ ವೊ
ಸುಬಹ ಕಭಿ ತೊ ಆಯೆಗಿ ಜಿಸ ಸುಬಹ
ಖಾತಿರ ಜುಗ ಜುಗ ಸೆ ಹಮ ಸಬ
ಮರಮರ ಜೀತೆ ಹೈ ಜಿಸ ಸುಬಹ ಕೆ
ಅಮೃತ ಕಿ ಧುನ ಮೆಂ ಹಮ ಜಹರ
ಕೆ ಪ್ಯಾಲೆ ಪೀತೆ ಹೆಂ ವೊ ಸುಬಹ ನ
ಆಯೆ ಆಜ ಮಗರ ವೊ ಸುಬಹ ಕಭಿ
ತೊ ಆಯೆಗಿ ವೊ ಸುಬಹ ಕಭಿ ತೊ
ಆಯೆಗಿ

[ಹಕ್ಕನ್ನು ಕೇಳುತ್ತಿರುವ ನನ್ನು ಶಿಕ್ಷಿಸದಂತಹ ಮುಂಜಾವು ಬಂದೇ ಬರುತ್ತದೆ ಈ "ಮುಂಜಾವಿನ" ಆಗಮನದ ಅಮೃತಕ್ಷಣಗಳ ನೆನಪಿನಲ್ಲೇ ನಾವು ನಾವು ವಿಷವನ್ನುಣ್ಣುತ್ತಿದ್ದೇವೆ. ಆ "ಮುಂಜಾವು" ಇಂದು ಬಾರದಿದ್ದಲ್ಲಿ ನಾಳೆಯಾದರೂ ಖಂಡಿತವಾಗಿ ಆಗಮಿಸುವುದು]

ತಾಜಮಹಲ ಕಂಡ ಕವಿ ಸಾಹಿರ ಸಿಡಿದು ಹಾಡುತ್ತಾರೆ :-

ಏಕ ಶಹನಶಹಾಂನೆ ಅಪನಿ ದೌಲತ
ಕಾ ಸಹಾರಾ ಲೇಕರ ಹಮ ಗರೀಬೊಂ
ಕಿ ಮೊಹಬ್ಬತ ಕಾ ಉಡಾಯಾ ಹೈ
ಮಜಾಕ

[ಒಬ್ಬ ರಾಜಾಧಿರಾಜನು ತನ್ನ ಸಂಪತ್ತಿನ ಸಹಾಯದಿಂದ ಬಡವರ ಪ್ರೇಮವನ್ನು ಧಿಕ್ಕರಿಸಿದ್ದಾನೆ]

ಸಾಹಿರ ಇನ್ನೂ ಹಾಡುತ್ತಾರೆ.

ಬೀತೆಂಗೆ ಕಭಿ ತೊ ದಿನ ಆಖಿರ ಯಹ
ಭೂಕ ಕೆಂ ಬೇಕಾರಿಕೆ
[ಹಸಿವು, ದಾರಿದ್ರ್ಯ, ಮತ್ತು ನಿರುದ್ಯೋಗದ ದಿನಗಳು ಕೊನೆಗಾದರೂ ನೀಗುವವು]

ಸಾಹಿರ ಮುಂದುವರಿದು ಹಾಡುತ್ತಾರೆ.

ಜಾಗೆ ಹೈಂ ಇಫಲಾಸ ಕೆ ಮಾರೆ
ಉಠೆ ಹೈಂ ಬೇಬಸ ದುಖಿಯಾರೆ
ಸೀನೊ ಮೆ ತೂಫಾನ ಕಾ ತಲತಮ
ಆಂಖೊ ಮೆ ಬಿಜಲಿ ಕೆ ಶರಾರೆ
ಚೋರ ಮಚಾ ಹೈ ಬಾಜಾರೋ ಮೆ
ಟೂಟ ಗಯೆ ದರ ಜಿಂದಾನೊ ಕಿ
ವಾಪಸ ಮಾಂಗ ರಹೆ ಹೈಂ ದುನಿಯಾ
ಗಸ್ಬಶುದಾ ಹಕ ಇನ್ಸಾನೊಂ ಕೆ

[ದರಿದ್ರರು ಜಾಗೃತರಾಗಿದ್ದಾರೆ ಅಶಕ್ತ ದುಃಖಿಗಳೂ ಜಾಗೃತರಾಗಿದ್ದಾರೆ ನೋಟದಲ್ಲಿ ಸಿಡಿಲಿನ ಜ್ವಾಲೆಗಳನ್ನುಗುಳುತ್ತಾ ರಸ್ತೆಗಳಲ್ಲಿ ಗರ್ಜಿಸುತ್ತ ಜೈಲಿನ ದ್ವಾರಗಳನ್ನು ಕಿತ್ತುಹಾಕಿ ಕಿತ್ತುಕೊಳ್ಳಲ್ಪಟ್ಟ ನ್ಯಾಯಬದ್ಧವಾದ ಹಕ್ಕುಗಳನ್ನು ಮರಳಿ ಕೇಳುತ್ತಿದ್ದಾರೆ]

ಈ ಮೂಲಕ ಸಾಹಿರ ವೈಚಾರಿಕವಾಗಿ ಸೈದ್ಧಾಂತಿಕವಾಗಿ ಸುಸ್ಪಷ್ಟವಿದ್ದುದರ ಕಲ್ಪನೆ ಬರುತ್ತದೆ. ಈ ಪ್ರಕಾರ ಜಗತ್ತು ತನಗೆ ನೀಡಿದ್ದುದನ್ನೇ ಕವಿ ಹೀಗೆ ಹಾಡಿ ಹಿಂತಿರುಗಿಸಿದ್ದಾರೆ.

ದುನಿಯಾನೆ ತಜುರ್ಬಾತ-ಓ-ಹವಾದಿಸ ಕಿ ಶಕ್ಲ ಮೆ
ಜೊ ಕುಛ ಮುಝೆ ದಿಯಾ ಹೈ
ವೊ ಲೌಟಾ ರಹಾಂ ಮೈ

[ಹೋರಾಟದ ಬದುಕಿನ ನನ್ನ ಅನುಭವಗಳನ್ನು ಕೊಡುವ ಜಗತ್ತು ನನಗೆ ಕೊಟ್ಟಿದ್ದನ್ನು ಮೂಲಕ ಹಿಂತಿರುಗಿಸುತ್ತಿರುವೆ]

ಕವಿ ತಮ್ಮನ್ನು ಹೀಗೆ ಹೋಲಿಸಿಕೊಳ್ಳುತ್ತಾರೆ.

ಹಮ ಫೂಲಹೈಂ ಔರೊಂ ಕೆ ಲಿಯೆ
ಲಾಯೆ ಹೈ ಖುಶಬೂ
ಅಪನೆ ಲಿಯೆ ಲೆ ದೇಕೆ ಫಕತ
ಇಕ ಸಿಲಾ ಹೈ

[ನಾವು ಹೂಗಳ ರೂಪದಲ್ಲಿ ಸುವಾಸನೆ ಕೊಡುತ್ತಿರುವೆವು]

ಅವರು ಹಾಡುಗಳನ್ನು ಬರೆದ ಕೊನೆಯ ಚಿತ್ರ "ಲಕ್ಷ್ಮಿ". ಈ ಚಿತ್ರಕ್ಕಾಗಿ ಉಷಾ ಖನ್ನಾರ ಸಂಗೀತ ನಿರ್ದೇಶನದಲ್ಲಿ ಎರಡು ಗೀತೆಗಳ ಧ್ವನಿ ಮುದ್ರಣ ಇತ್ತೀಚೆಗಷ್ಟೇ ನಡೆದಿತ್ತು.

ಈ ಪ್ರಕಾರ ಲುಧಿಯಾನಾದ ಒಬ್ಬ ಭೂಮಾಲಿಕನ ಪರಿತ್ಯಕ್ತ ಹೆಂಡತಿಯ ಪುತ್ರನಾದ ಸಾಹಿರ ಜಗತ್ತಿನ ಉಪಕಾರವನ್ನೆಲ್ಲ ತೀರಿಸಿ ನಮ್ಮೆಲ್ಲರನ್ನು ಅಗಲಿ ಇಂದು ಹೊರಟು ಹೋಗಿದ್ದಾರೆ ಅವರು ಹೊರಟು ಹೋದ ಪಥ ಹಿಂತಿರುಗಿ ಬಾರದ ಪಥವಾಗಿದ್ದರೂ ಜನತೆಯ ಈ ಕವಿ ಅಮರನಾಗಿದ್ದಾನೆ. ಹಾಗೂ ಅಮರ ಉಳಿಯುತ್ತಾನೆ.

ಜಿಸ್ಮ ಕಿ ಮೌತ ಕೊಯಿ ಮೌತ
ನಹೀಂ ಹೋತಿ ಹೈ
ಜಿಸ್ಮ ಮಿಟ ಜಾನೆ ಸೆ ಇನ್ಸಾನ
ನಹೀಂ ಮರ ಜಾತೆ!

ದೇಹದ ಸಾವು ಸಾವಲ್ಲ, ಶರೀರ ನಾಶವಾದರೆ ಮನುಷ್ಯ ನಾಶವಾದಂತಲ್ಲ.

—"ಸಮದರ್ಶಿ" ಕೃಪೆಯಿಂದ

ಸೂಚನೆ :- ಉರ್ದು ಕಾವ್ಯಗುಚ್ಛ (ಶಾಯರಿ)ಗಳ ಅಕ್ಷರಶಃ ಅನುವಾದ ಕಷ್ಟವಾಗಿರುವುದರಿಂದ ತಿರುಳಿಗೆ ಕುಂದು ಬರದಂತೆ ಅರ್ಥೈಸಲಾಗಿದೆ.

○

ಡಿ.ವೈ.ಓ. ಕಾರ್ಯಕ್ರಮಕ್ಕೆ ಮತ್ತು ಸಮುದಾಯ ಜಾತಾಕ್ಕೆ ಎಸ್. ಎಫ್. ಐ. ಬೆಂಬಲ

ಜನವರಿ 15ರಂದು ಸರ್ಕಾರಿ ಕಛೇರಿಗಳ ಮುಂದೆ ಪ್ರದರ್ಶನ ನಡೆಸುವ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಕಾರ್ಯಕ್ರಮಕ್ಕೆ ಎಸ್. ಎಫ್. ಐ ರಾಜ್ಯ ಸಮಿತಿಯು ಪೂರ್ಣ ಬೆಂಬಲ ನೀಡಿದೆ.

ಜನವರಿ 15ರಿಂದ 'ಸಮುದಾಯ'ವು ರಾಜ್ಯಾದ್ಯಂತ ನಡೆಸುವ ಜಿಲ್ಲಾ ಮಟ್ಟದ ಜಾತಾ ಕಾರ್ಯಕ್ರಮದಲ್ಲಿ ಎಸ್. ಎಫ್ ಐ ಸದಸ್ಯರು ಭಾಗವಹಿಸಿ ಸಹಕರಿಸಬೇಕಾಗಿ ಎಸ್ ಎಫ್ ಐ ರಾಜ್ಯ ಸಮಿತಿಯು ಕರೆ ನೀಡಿದೆ

ಎಸ್.ಎಫ್.ಐ. ಹತ್ತನೇ ವಾರ್ಷಿಕೋತ್ಸವ ದಿನಾಚರಣೆ

ಎಸ್ ಎಫ್ ಐ ಕೇಂದ್ರ ಸಮಿತಿಯು ಕರೆಯ ಮೇರೆಗೆ ಡಿಸೆಂಬರ್ 30ರಂದು 10ನೇ ವಾರ್ಷಿಕೋತ್ಸವ ದಿನಾಚರಣೆಯನ್ನು ಆಚರಿಸಿದ್ದು ಈ ಬಗ್ಗೆ ವರದಿಗಳು ಬರುತ್ತಿವೆ.

ಮೈಸೂರು

ಡಿಸೆಂಬರ್ 30ರಂದು ಮೈಸೂರಿನ ಮಾನಸಗಂಗೋತ್ರಿ ಕಾಂಪಸ್ಸಿನಲ್ಲಿ ಎಸ್. ಎಫ್ ಐ ಧ್ವಜಾರೋಹಣವನ್ನು ನಗರ ಸಮಿತಿ ಅಧ್ಯಕ್ಷ ಕಾಂ ಸಂಜಯ್ ನೆರವೇರಿಸಿದರು. ರಾಜ್ಯ ಶಖೆ ಪ್ರಧಾನ ಕಾರ್ಯದರ್ಶಿ ಆರಾಧ್ಯ ಅವರು ಎಸ್. ಎಫ್. ಐ ಬೆಳೆದು ಬಂದ ದಾರಿಯ ಬಗ್ಗೆ ವಿವರಿಸಿದರು ಕಾಂ. ಸಲಿನ್ ವಂದನಾರ್ಪಣೆ ಮಾಡಿದರು.

ಬೆಂಗಳೂರು

ಡಿ. 30ರಂದು ಬೆಂಗಳೂರಿನ ಶ್ರೀರಾಮಪುರದಲ್ಲಿ ಆಯುರ್ವೇದಿಕ್ ಕಾಲೇಜಿನ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕಾಂ. ಮಂಜುನಾಥ್‌ರವರು ಧ್ವಜಾರೋಹಣ ಮಾಡಿದರು. ನಂತರ ನಡೆದ ಸಭೆಯಲ್ಲಿ ಕಾರ್ಯಕ್ರಮದ ಉದ್ದೇಶದ ಬಗ್ಗೆ ವಿವರಿಸಲಾಯಿತು. ಕಾಂ. ಗೋಪಾಲಕೃಷ್ಣ ಸ್ವಾಗತಿಸಿದರು. ಕಾಂ. ಬಸವಲಿಂಗಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾಂ. ಎನ್. ರಾಜಣ್ಣ ವಂದನಾರ್ಪಣೆ ಮಾಡಿದರು. ಕಾಂ. ಶ್ರೀರಾಮ್, ಪ್ರಸನ್ನ ಕುಮಾರ್, ಜನಕರಾಜ್, ಟಿ. ಸಿಂಚಪ್ಪನವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

○

ಜನವರಿ - 15 ರಿಂದ ಫೆಬ್ರವರಿ - 1 ರವರೆಗೆ

ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಜೊತೆಗೂಡಿ-ರೈತನತ್ತ ಸಾಂಸ್ಕೃತಿಕ ಜಾಥಾ

1979 ರ ಅಕ್ಟೋಬರ್-ನವೆಂಬರ್‌ನಲ್ಲಿ ಕರ್ನಾಟಕದ ಮೂಲೆಮೂಲೆಗಳ ಸಮುದಾಯವು ನಡೆಸಿದ ಸಾಂಸ್ಕೃತಿಕ ಜಾಥಾ ಇನ್ನೂ ಜನಮನದಲ್ಲಿ ಹಸಿರಾಗಿರುವಾಗಲೇ ಸಮುದಾಯವು ಅಂಥದ್ದೇ ಬೃಹತ್ ಸಾಹಸವೊಂದನ್ನು ಇನ್ನೂ ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಲಿದೆ. 1981 ರ ಜನವರಿ 15 ರಿಂದ 31 ರ ವರೆಗೆ ನಾಲ್ಕು ಸಾವಿರ ಕಿಲೋಮೀಟರುಗಳಷ್ಟು ಪ್ರಯಾಣವನ್ನು ಕಾಲ್ನಡಿಗೆಯಲ್ಲಿ ಸಾಂಸ್ಕೃತಿಕ ಜಾಥಾ ಹೊರಟಿರುವುದು ನಿಜಕ್ಕೂ ಅಚ್ಚರಿಪಡಬೇಕಾದ, ಅಷ್ಟೇ ಅಲ್ಲ ಅಭಿನಂದನೀಯ ವಿಷಯ. ಒಟ್ಟಿಗೆ ಹನ್ನೆರಡು ತಂಡಗಳು ಬೀದರ್ ಗುಲ್ಬರ್ಗ, ರಾಯಚೂರು, ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಕೋಲಾರ, ದಕ್ಷಿಣ ಕನ್ನಡ, ಶಿವಮೊಗ್ಗ, ಧಾರವಾಡ, ಬೆಳಗಾಂ, ಬಿಜಾಪುರದಿಂದ ಹೊರಡುತ್ತಿರುವ ಈ ಸಾಂಸ್ಕೃತಿಕ ಜಾಥಾ ಸಾಂಸ್ಕೃತಿಕ ಚರಿತ್ರೆಯಲ್ಲಿ ಕರ್ನಾಟಕದ ಮಟ್ಟಿಗೆ ಅಷ್ಟೇ ಏಕೆ, ಬಹುಶಃ ಭಾರತದಲ್ಲೇ ಮೊದಲ ಹೆಜ್ಜೆ ಎಂದರೆ ಅತಿಶಯೋಕ್ತಿಯಲ್ಲ.

ಈ ಸಾಂಸ್ಕೃತಿಕ ಜಾಥಾದ ಮುಖ್ಯ ಗುರಿ ಭಾರತದ ಬಹುಪಾಲು ಅನಕ್ಷರಸ್ಥ ಹಾಗೂ ಗ್ರಾಮೀಣ ಜನತೆಯಲ್ಲಿ ಜನಜಾಗೃತಿಯನ್ನು ಉಂಟು ಮಾಡುವುದೇ ಆಗಿದೆ. ಜಾತೀಯತೆ ಮೂಢನಂಬಿಕೆ, ಆರ್ಥಿಕ ಅಸಮಾನತೆ ಸಾಮಾಜಿಕ ಅಸಮಾನತೆ ಮುಂತಾದ ಸಮಸ್ಯೆಗಳತ್ತ ಬೆಳಕು ಚೆಲ್ಲುವಂತಹ ಕಾರ್ಯಕ್ರಮಗಳನ್ನು ಜಾಥಾದಲ್ಲಿ ನಿಯೋಜಿಸಿದ್ದರೂ ಈ ಸಲದ ಜಾಥಾದ ಮುಖ್ಯ ಘೋಷಣೆ 'ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ರೈತನತ್ತ ಸಾಂಸ್ಕೃತಿಕ ಜಾಥಾ' ಎಂಬುದಾಗಿದ್ದು ರೈತಸಮಸ್ಯೆಗಳಿಗೆ ಒತ್ತು ಕೊಡುವುದಾಗಿದೆ. ರೈತ ಸಮುದಾಯ ಇಂದು ಒಗ್ಗಟ್ಟಾಗಿ ಅವರ ದುರವಸ್ಥೆಗೆ ಕಾರಣವಾದ ವ್ಯವಸ್ಥೆಯ ವಿರುದ್ಧ ಹೋರಾಡಬೇಕಾಗಿರುವುದು ಸಮಕಾಲೀನ ಸಂದರ್ಭದ ಅವಶ್ಯಕತೆಯಾಗಿದೆ. ಸಮಕಾಲೀನ ಸಮಸ್ಯೆಗಳಿಗೆ ಯಾವತ್ತೂ ಪ್ರತಿಸ್ಪಂದಿಸುವ ಸಮುದಾಯ, ಈಗಲೂ ಹಳ್ಳಿಹಳ್ಳಿಗಳಲ್ಲಿ ರೈತನತ್ತ ಸಾಂಸ್ಕೃತಿಕ ಜಾಥಾವನ್ನು ಸಂಘಟಿಸುವುದು ಸಮಯೋಚಿತವಾಗಿದೆ. ರಾಜ್ಯಾದ್ಯಂತ ಹಬ್ಬಿ ಬೆಳೆಯುತ್ತಿರುವ ರೈತಚಳುವಳಿಯ ಹೋರಾಟಕ್ಕೆ ಈ ಜಾಥಾವು ಪೂರಕವೂ ಪೋಷಕವೂ ಆಗಲಿದೆ.

ಈ ಸಾಂಸ್ಕೃತಿಕ ಜಾಥಾದ ಸಂದರ್ಭದಲ್ಲಿ ಸಮುದಾಯವು ಅನಕ್ಷರಸ್ಥ ಜನತೆಯ ಸಮೂಹ ಮಾಧ್ಯಮಗಳಾದ ನಾಟಕ, ಹಾಡುಗಳು, ಚಲನ ಚಿತ್ರ, ಚಿತ್ರಕಲಾ ಪ್ರದರ್ಶನಗಳ ಮೂಲಕ ಜನತೆಯ ಹತ್ತಿರಹೋಗುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಈ ಜಾಥಾವನ್ನು ಸಂಘಟಿಸುತ್ತಿರುವುದು ಸಮುದಾಯದವರಾದರೂ ಈ ಜಾಥಾದಲ್ಲಿ ಎಲ್ಲಾ ಪ್ರಗತಿಪರ ಕಲಾವಿದರೂ ಸಾಮಾಜಿಕ-ಸಾಂಸ್ಕೃತಿಕ ಕಾರ್ಯಕರ್ತರೂ, ಬುದ್ಧಿಜೀವಿಗಳೂ, ವಿದ್ಯಾರ್ಥಿಗಳು ಮತ್ತು ಲೇಖಕರು ಪಾಲ್ಗೊಳ್ಳುವರು. ಆದ್ದರಿಂದ ಇದು ಇಡೀ ಜನಸಮುದಾಯದ ಜಾಥಾ ಆಗಲಿದೆ.

ಸಾಂಸ್ಕೃತಿಕ ಜಾಥಾದಂತಹ ಕಾರ್ಯಕ್ರಮಗಳಲ್ಲಿ, ಜನಸಮುದಾಯದ ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚು ವಿಶ್ವಾಸವಿರಿಸುವ ಸಮುದಾಯವು ಸ್ಥಳೀಯ ಜನರಿಗೆ ಮತ್ತು ಜಾನಪದ ಕಲಾವಿದರಿಗೇ ಹೆಚ್ಚು ಒತ್ತು ಕೊಡುತ್ತಿದೆ. ಪ್ರತಿ ಹಳ್ಳಿಯಲ್ಲೂ ಅಲ್ಲಿನ ಸ್ಥಳೀಯ ತಂಡಗಳು ಜಾಥಾದಲ್ಲಿ ಪಾಲ್ಗೊಳ್ಳುತ್ತಿರುವುದರಿಂದ ಹಿಂದಿನ ಜಾಥಾಗಿಂತ ಹೆಚ್ಚು ಹೆಚ್ಚು ಗಾಢವಾದ ಕಾರ್ಯಪ್ರವೃತ್ತವಾಗಬಹುದಲ್ಲದೆ, ಜನಪದಕಲೆಗಳನ್ನು ಬಳಸಿಕೊಳ್ಳಲು ಸಾಧ್ಯವಾಗುತ್ತದೆ ಆಯಾ ಜಿಲ್ಲೆಗಳಿಗೆ ಸಂಬಂಧಪಟ್ಟ ಎಲ್ಲಾ ಪ್ರಗತಿಪರ ಲೇಖಕರು, ಕಲಾವಿದರು ಮತ್ತು ಪ್ರಗತಿಪರ ಸಂಸ್ಥೆಗಳು ಜಾಥಾದಲ್ಲಿ ಭಾಗವಹಿಸುತ್ತಾರೆ. ಈ ಲೇಖಕ-ಕಲಾವಿದರುಗಳಿಂದ ಉಪನ್ಯಾಸ, ಚರ್ಚೆಗಳನ್ನು ಏರ್ಪಡಿಸಿ ಕಲಾವಿದರಿಗೂ ಜನತೆಗೂ ನಡುವೆ ಸಂಬಂಧ ಕಲ್ಪಿಸುವ ಅವಕಾಶವನ್ನು ಈ ಜಾಥಾ ಮಾಡಿಕೊಡಲಿದೆ. ಈ ಉಪನ್ಯಾಸ ಕಾರ್ಯಕ್ರಮಗಳಲ್ಲಿ ಮಾತನಾಡಲು ಹೆಚ್. ನರಸಿಂಹಯ್ಯ, ಸಿದ್ಧಲಿಂಗಯ್ಯ, ಎಂ.ಎಸ್. ಸತ್ಯು, ಯು. ಆರ್. ಅನಂತಮೂರ್ತಿ, ಲಂಕೇಶ್, ದಯಾಪವಾರ್, ಇ.ಎಂ.ಎಸ್. ನಂಬೂದ್ರಿಪಾಡ್, ರಾಜಶೇಖರರೆಡ್ಡಿ, ಹಾ.ಮಾ. ನಾಯಕ್, ದೇವನೂರು ಮಹಾದೇವ್, ಬರಗೂರು ರಾಮಚಂದ್ರಪ್ಪ, ಎಸ್. ವೆಂಕಟರಾವ್, ಚಂದ್ರಶೇಖರ ಪಾಟೀಲ, ಬಿ ವಿ. ಕಾರಂತ, ಜಿ ರಾಮಕೃಷ್ಣ, ಬಾದಲ್ ಸರ್ಕಾರ್, ವಿಜಯ ತೆಂಡೂಲಕರ್, ಜಿ ಎಸ್. ಶಿವರುದ್ರಪ್ಪ, ವಿವಾನ್ ಸುಂದರಂ, ಶೇಜಸ್ವಿನಿ, ಬಸು ಚಟರ್ಜಿ, ಕು ಶಿ ಹರಿದಾಸಭಟ್ಟ, ಜಾರ್ಜ್ ಫೆರ್ನಾಂಡೀಸ್, ಬಿ.ವಿ. ವೈಕುಂಠರಾಜು-ಮುಂತಾದ ಪ್ರಗತಿಪರ ಲೇಖಕ ಕಲಾವಿದರನ್ನು ಆಹ್ವಾನಿಸಲಾಗಿದೆ.

ಈ ಸಾಂಸ್ಕೃತಿಕ ಜಾಥಾದಲ್ಲಿ ಭೂಸುಧಾರಣೆ, ಮೂಢನಂಬಿಕೆ, ಜಾತೀಯತೆ, ರೈತಚಳುವಳಿ, ಮಹಿಳೆಯನ್ನು ಕುರಿತ ನಾಟಕಗಳನ್ನು ಆಡುವ ಯೋಜನೆಯಿದೆ, ಪತ್ರಸಂಗಪ್ಪ, ಬೆಲ್ಚಿ, ನರಗುಂದದ ಬಂಡಾಯ, ದಲಿತರು ಬರುವರು ಮುಂತಾದ ಇನ್ನೂ ಹಲವು ನಾಟಕಗಳನ್ನು ಈ ಸಾಂಸ್ಕೃತಿಕ ಜಾಥಾದಲ್ಲಿ ಅಭಿನಯಿಸಲಾಗುವುದು.

ಈ ಸಲದ ಜಾಥಾದ ಮತ್ತೊಂದು ವಿಶೇಷವೆಂದರೆ ಪ್ರತಿ ಜಾಥಾದಲ್ಲೂ ಒಂದು 'ಚಿತ್ರಕಲಾ ಪ್ರದರ್ಶನ'ವನ್ನು ಏರ್ಪಡಿಸಲಾಗುವುದು. ರೈತನ ಸಮಸ್ಯೆಗಳನ್ನು ಮತ್ತು ಮಹಿಳೆಯರ ಸಮಸ್ಯೆಗಳನ್ನು ಕುರಿತ ಪ್ರದರ್ಶನಗಳು ಇರುತ್ತವೆ. ರೇವನ್, ಗುಜ್ಜಾರಪ್ಪ ಪ್ರಸನ್ನ, ಮಣಿ, ಹಡಪದ ಮುಂತಾದ ಕಲಾವಿದರಿಂದ ಚಿತ್ರಿತವಾದ ಚಿತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ.

ಈ ಸಾಂಸ್ಕೃತಿಕ ಜಾಥಾಕ್ಕೆ ವೆಚ್ಚವಾಗುವ ಹಣವನ್ನು ಆಕರ್ಷಕವಾದ ಮತ್ತು ಪ್ರಾಕ್ಷಿಕವಾಗಿ ಕೈಗಳಿಂದ ಚಿತ್ರಿಸಿದ ವೈವಿಧ್ಯಮಯವಾದ ಶುಭಾಶಯ ಕಾರ್ಡುಗಳನ್ನು ಮಾಡಿ ಅವನ್ನು ಬೆಂಗಳೂರಿನ ಮತ್ತು ರಾಜ್ಯದ ವಿವಿಧ ಭಾಗಗಳಲ್ಲಿ ಕಡಿಮೆ ಬೆಲೆಗೆ ಮಾರುವುದರ ಮೂಲಕ ಹಣ ಸಂಗ್ರಹಿಸಲಾಗುತ್ತಿದೆ. ಈ ಶುಭಾಶಯ ಕಾರ್ಡುಗಳು ಐವತ್ತರಷ್ಟು ವೈವಿಧ್ಯಮಯ ನಮೂನೆಯವುಗಳಿದ್ದು ಇವನ್ನು ಅಮಿತ್ ಸರ್ಕಾರ್, ಹಡಪದ್, ವೆಂಕಟಾಚಲಪತಿ, ಮಣಿ, ಧನಲಕ್ಷ್ಮಿ-ಮುಂತಾದ ಕಲಾವಿದರು ವಿನ್ಯಾಸಗಳನ್ನು ರೂಪಿಸಿದ್ದು, ನೂರಾರು ಕುಂಚಗಳು ಈ ಶುಭಾಶಯ ಕಾರ್ಡುಗಳಲ್ಲಿ ಕೈಯಾಡಿಸಿವೆ. ಹೀಗೆ ಸಾಂಸ್ಕೃತಿಕ ಜಾಥಾ ಪ್ರಾರಂಭವಾಗುವುದಕ್ಕೆ ಮುಂಚೆಯೇ ಸಮುದಾಯ ಸದಸ್ಯರ ಮತ್ತು ಹಿತೈಷಿಗಳ ಕಲಾತ್ಮಕ ಪ್ರತಿಭೆಯ ಬೆಳಕಿಗೆ ಬರಲು ಈ ಗ್ರೀಟಿಂಗ್ ಕಾರ್ಡುಗಳು ಸಹಾಯಕವಾಗಿವೆ.

ಈ ಜಾಥಾದ ಮತ್ತೊಂದು ವೈಶಿಷ್ಟ್ಯ, 'ಸಂಚಾರಿ ಪುಸ್ತಕ ಪ್ರದರ್ಶನ' ಇದರಲ್ಲಿ ಪ್ರಗತಿಪರ ನೂತನ ಸಂಸ್ಕೃತಿಯ ನಿರ್ಮಾಣಕ್ಕೆ ಅತ್ಯವಶ್ಯಕವಾದ ಎಲ್ಲ ರೀತಿಯ ಪುಸ್ತಕಗಳು ಮಾರಾಟವಾಗುತ್ತವೆ. 'ರೈತ ಚಳುವಳಿ'ಗೆ ಈ ಜಾಥಾದಲ್ಲಿ ಹೆಚ್ಚು ಒತ್ತುಕೊಟ್ಟಿರುವುದರಿಂದ 'ತೆಲಂಗಾಣ ರೈತ ಹೋರಾಟ' (ಜಿ. ರಾಜಶೇಖರ), 'ಶಿವಮೊಗ್ಗ ರೈತ ಚಳುವಳಿ' (ಜಿ ಪಿ. ಬಸವರಾಜು), 'ಚಿರಸ್ಮರಣೆಯ ಕಯ್ಯೂರು' (ನಿರಂಜನ) -ಮುಂತಾದ ಕೃತಿಗಳನ್ನು ಪ್ರಕಟಿಸಲಾಗಿದೆ. ಇವೇ ಅಲ್ಲದೆ, ಹಿಂದಿನ ಜಾಥಾದಲ್ಲಿ ಪ್ರಕಟಿಸಿದ್ದ ಎಂ. ಕೆ. ಭಟ್‌ರ ಕಾರ್ಮಿಕ ಸಂಘಟನೆ ಮತ್ತು ಸಾಮಾಜಿಕ ಬದಲಾವಣೆ, ಇಕ್ಬಾಲ್ ಹುಸೇನ್‌ರ 'ನಮ್ಮ ವಿದ್ಯಾಭ್ಯಾಸ ಪದ್ಧತಿ,' ಶಿವಾಜಿಗಣೇಶನ್‌ರ 'ಹರಿಜನರ ಮೇಲಿನ ದೌರ್ಜನ್ಯ,' ಅರ್ಯಮನ್‌ರ 'ಆರ್.ಎಸ್.ಎಸ್. ಒಂದು ವಿಷವೃಕ್ಷ', ನರಸಿಂಹನ್‌ರ 'ಬಹುರಾಷ್ಟ್ರೀಯ ಸಂಸ್ಥೆಗಳು ಮಾಲತಿಯವರ 'ಮಹಿಳಾ ವಿಮೋಚನೆ' ಮುಂತಾದವನ್ನು ಪ್ರಕಟಿಸಲಾಗಿದೆ. ಹಳ್ಳಿಯ ಜನ ಹಳೆಯ ಮೌಲ್ಯಗಳನ್ನು ಕಿತ್ತೆಸೆದು ಹೊಸ ಮೌಲ್ಯಗಳನ್ನು ರೂಪಿಸಿಕೊಳ್ಳಲು ಈ ಜಾಥಾ ಸಹಾಯಕವಾಗುವುದು.

ಕಲಾವಿದರು ಮತ್ತು ಬರಹಗಾರರು ಜನಗಳಿಂದ ನೇರ ಸಂಪರ್ಕ ಹೊಂದಿದಾಗ ಕಲಿಯಬಹುದಾದ ಮತ್ತು ಕಲಿಸಬಹುದಾದ ಸಾಧ್ಯತೆಗಳಿರುವುದರಿಂದ ಸಮುದಾಯದವರ ಈ ಸಾಂಸ್ಕೃತಿಕ ಜಾಥಾ ಸಾಂಸ್ಕೃತಿಕ ಕಾಳಜಿಯುಳ್ಳವರೆಲ್ಲಾ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ.

-ಆಶಾ

ಎಸ್. ಎಫ್. ಐ. ನಿಲುವೆ

ಕರ್ನಾಟಕ ರಾಜ್ಯ ಸರಕಾರವು ಇತ್ತೀಚೆಗೆ ಕೆಲವು ಹೊಸ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದು ತೀವ್ರವಾದ ವಿವಾದಕ್ಕೀಡಾಗಿದೆ ಸರ್ಕಾರದ ನಿಲುವಿನ ಪರ ಹಾಗೂ ವಿರೋಧ ವಿದ್ಯಾರ್ಥಿಗಳು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದಾರೆ ಈ ಸಂದರ್ಭದಲ್ಲಿ ಎಸ್. ಎಫ್. ಐ. ತನ್ನ ನಿಲುವನ್ನು ಸ್ಪಷ್ಟಪಡಿಸಲು ಈ ಹೇಳಿಕೆಯನ್ನು ನೀಡುತ್ತಿದೆ.

ನಮ್ಮ ದೇಶದಲ್ಲಿ ಇನ್ನೂ ಹೆಚ್ಚಿನ ವೈದ್ಯರುಗಳು ಅಗತ್ಯವಿರುವುದರಿಂದ ಮತ್ತಷ್ಟು ಮೆಡಿಕಲ್ ಕಾಲೇಜುಗಳನ್ನು ತೆರೆಯುವುದು ಸ್ವಾಗತಾರ್ಹ.

ಆದರೆ ವೈದ್ಯಕೀಯ ಪದವೀಧರರೂ ಸೇರಿದಂತೆ ಎಲ್ಲಾ ಪದವೀಧರರಿಗೂ ನಿರುದ್ಯೋಗ ಸಮಸ್ಯೆ ಕಾಡುತ್ತಿದೆ. ಅದರಲ್ಲೂ ಲಕ್ಷಾಂತರ ರೂಪಾಯಿ ಕ್ಯಾಪಿಟೇಷನ್ ಶುಲ್ಕ ಮತ್ತು ದುಬಾರಿ ಶಿಕ್ಷಣ ಶುಲ್ಕ ನೀಡಿ ವಿದ್ಯಾಭ್ಯಾಸ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳಿಗಂತೂ ಉದ್ಯೋಗದ ಭದ್ರತೆಯೂ ಇಲ್ಲ ಮತ್ತು ತಾವು ವೆಚ್ಚ ಮಾಡಿದ ಹಣವನ್ನು ಹಿಂತಿರುಗಿ ಪಡೆಯಲು ಗ್ಯಾರಂಟಿಯೂ ಇಲ್ಲದಾಗಿದೆ. ಇದರಿಂದಾಗಿ ಹೊಸ ಮೆಡಿಕಲ್ ಕಾಲೇಜುಗಳನ್ನೇ ಪ್ರಾರಂಭಿಸಬಾರದೆಂಬ ಪ್ರವೃತ್ತಿ ಬೆಳೆಯುತ್ತಿದೆ ಈ ಸಂಕುಚಿತ ಮತ್ತು ಅವೈಜ್ಞಾನಿಕ ಧೋರಣೆಯನ್ನು ಎಸ್. ಎಫ್. ಐ. ವಿರೋಧಿಸುತ್ತದೆ.

ಇದೇ ಸಂದರ್ಭದಲ್ಲಿ ವೈದ್ಯಕೀಯ ಶಿಕ್ಷಣದ ವ್ಯಾಪಾರೀಕರಣವನ್ನು ತಡೆಗಟ್ಟಲು ಕ್ಯಾಪಿಟೇಷನ್ ಶುಲ್ಕವನ್ನು ಸಂಪೂರ್ಣ ರದ್ದುಮಾಡಬೇಕೆಂದೂ ಎಲ್ಲ ಖಾಸಗೀ ಮೆಡಿಕಲ್ ಕಾಲೇಜುಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಮತ್ತು ಸರ್ಕಾರವೇ ಹೆಚ್ಚಿನ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಬೇಕೆಂದು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಉದ್ಯೋಗದ ಗ್ಯಾರಂಟಿ ನೀಡಬೇಕೆಂದು ಕರ್ನಾಟಕ ರಾಜ್ಯ ಸರ್ಕಾರವನ್ನು ಎಸ್. ಎಫ್. ಐ. ಒತ್ತಾಯಿಸುತ್ತದೆ.

ತನ್ನ ರಾಜಕೀಯ ಲಾಭಕ್ಕಾಗಿ ಎಲ್ಲ ಮತೀಯ ಸಂಸ್ಥೆಗಳಿಗೆ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಕರ್ನಾಟಕ ರಾಜ್ಯ ಸರಕಾರದ ಕ್ರಮವನ್ನು ಎಸ್. ಎಫ್. ಐ. ತೀವ್ರವಾಗಿ ಖಂಡಿಸಿದೆ. ಮತ್ತು ಶಿಕ್ಷಣವನ್ನು ಮತೀಯ ಸಂಸ್ಥೆಗಳಿಂದ ದೂರವಿಡಬೇಕೆಂದು ಎಸ್. ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಒತ್ತಾಯಿಸಿದ್ದಾರೆ.

○

ಕಾರ್ಮಿಕರ ಮುಷ್ಕರಕ್ಕೆ ಸಿ.ಐ.ಟಿ.ಯು. ಬೆಂಬಲ

ಬೆಂಗಳೂರು ಮತ್ತು ಹೈದರಾಬಾದ್‌ಗಳ ಸಾರ್ವಜನಿಕ ವಲಯಗಳ ಕಾರ್ಖಾನೆ ಕಾರ್ಮಿಕರ ಮುಷ್ಕರಕ್ಕೆ, ಆಡಳಿತವರ್ಗ ಮತ್ತು ಸರ್ಕಾರದ ನಿರ್ಲಕ್ಷವೇ ಕಾರಣ ಎಂದು ಸಿ. ಐ. ಟಿ ಯು. ಪ್ರಧಾನ ಕಾರ್ಯದರ್ಶಿ ಪಿ. ರಾಮಮೂರ್ತಿ ಅವರು ಹೇಳಿದ್ದಾರೆ. ಬೆಂಗಳೂರಿನ ಕಾರ್ಮಿಕರ ಒಗ್ಗಟ್ಟನ್ನು ಸಿ. ಐ. ಟಿ. ಯು. ಅಭಿನಂದಿಸುತ್ತದೆ ಮತ್ತು ತನ್ನ ಹೃತ್ಪೂರ್ವಕ ಬೆಂಬಲವನ್ನು ಸೂಚಿಸುತ್ತದೆ ಎಂದೂ ಅವರು ಹೇಳಿದ್ದಾರೆ. ಈ ಹೋರಾಟಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಅವರು ಮನವಿ ಮಾಡಿದ್ದಾರೆ.

○

ಪ್ರಗತಿಪರ ಜನತಂತ್ರ ರಂಗದ ಉದಯ

(1ನೇ ಪುಟದಿಂದ)

ಪಕ್ಷಗಳೇ ಕಾರಣವೆಂದು ದೂಷಿಸಿತು. ಸಮಸ್ಯೆಗಳು ಆಳವಾಗುತ್ತಿರುವುದಕ್ಕೆ, ಆಳುವ ಪಕ್ಷದ ಆಡಳಿತ ವೈಖರಿಯೇ ಕಾರಣವಾಗಿದೆ ಎಂಬುದನ್ನು ಗಮನಿಸಲಾಯಿತು.

ಪ್ರತಿನಿತ್ಯ ಹಿಡಿತಕ್ಕೆ ಸಿಗದಂತೆ ಜೀವನಾವಶ್ಯಕ ವಸ್ತುಗಳ ಬೆಲೆಏರಿಕೆ, ದಿನದಿನಕ್ಕೂ ಹದಗೆಡುತ್ತಿರುವ ಕಾನೂನು ವ್ಯವಸ್ಥೆ ವಿವಂಚನೆಗೀಡು ಮಾಡುವಂತಾಗಿದೆ. ಸರಕಾರದ ಧೋರಣೆಗಳ ಪರಿಣಾಮವಾಗಿ ರೈತರು, ಕೂಲಿಕಾರರು, ಅಲ್ಪಸಂಖ್ಯಾತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ-ಯುವಜನರು ತೊಂದರೆಗೀಡಾಗಿದ್ದಾರೆ. ಜನತೆಯ ಅಪಾರ ಸಂಕಷ್ಟಗಳಿಗೆ ಪರಿಹಾರಕ್ಕೆ ಯತ್ನಿಸದೇ ಕೇಂದ್ರಸರಕಾರ ನಿಷ್ಕ್ರಿಯವಾಗಿ ಕುಳಿತಿರುವುದು ಶೋಚನೀಯ.

ರಾಜ್ಯ(ಕರ್ನಾಟಕ)ದಲ್ಲಿ ಸರಕಾರದ ಆಡಳಿತ ಮುಖ್ಯಮಂತ್ರಿ ಗುಂಡೂರಾವ್‌ರ ಕೈಯಲ್ಲಿ ಕೇಂದ್ರೀಕೃತವಾಗಿದೆ. ಹಸಿವಿನಿಂದ ಪರದಾಡುತ್ತಿರುವ ಜನತೆಗೆ ವಿವೇಚನೆ ಇಲ್ಲದೇ ಆಶ್ವಾಸನೆಗಳನ್ನು ಕೊಡಲಾಗುತ್ತಿದೆ. ಸಮಸ್ಯೆಗಳಿಗೆ ಪರಿಹಾರ ರೂಪವಾಗಿ ಅಚ್ಚುಕಟ್ಟಾದ, ವೈಜ್ಞಾನಿಕ ನಿರ್ಧಾರಗಳನ್ನು ಕೈಗೊಳ್ಳದೇ, ಧಿಡೀರ್ ನಿರ್ಧಾರಕ್ಕೆಗೊಳ್ಳುತ್ತಿದ್ದುದು ಗಂಭೀರವಾದ ಸಂಗತಿಯಾಗಿದೆ. ಆಶ್ವಾಸನೆ ಮತ್ತು ಈಡೇರಿಕೆಗಳ ನಡುವೆ ತಾಳಮೇಳವಿಲ್ಲದಾಗಿದೆ. ಹುಚ್ಚುಹುಚ್ಚು ನಿರ್ಧಾರಗಳಿಂದ ಹದಗೆಟ್ಟಿರುವ ರಾಜ್ಯದ ಆರ್ಥಿಕ ಪರಿಸ್ಥಿತಿ ಕೈಮೀರಿ ಹೋಗುವುದರಲ್ಲಿದೆ. ನೈಜವಾದ ಪರಿಹಾರ ಜನತೆಗೆ ದೊರೆಯುತ್ತಿಲ್ಲ. ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗುವ ಬದಲು ಮುಖ್ಯಮಂತ್ರಿ ಮತ್ತವರ ಸಹೋದ್ಯೋಗಿಗಳು ದಿನನಿತ್ಯ ಸನ್ಮಾನ ಸಮಾರಂಭಗಳಲ್ಲೇ ನಿರತರಾಗಿರುವರು. ಹಣದ ಹೇಯ ಪ್ರದರ್ಶನದೊಟ್ಟಿಗೇ ಬಾಡಿಗೆ ಜನರನ್ನು ಸಮಾರಂಭಗಳಿಗೆ ಕರೆಯುವ ಮೂಲಕ ಅಧಿಕಾರದ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಒಟ್ಟಿನ ಮೇಲೆ ಜನತೆಯ ಸಮಸ್ಯೆಗಳಿಗೆ ಯೋಗ್ಯ ಪರಿಹಾರ ದೊರಕದೇ ರಾಜ್ಯದ ದೈನಂದಿನ ಪರಿಸ್ಥಿತಿ ವಿಷಮಿಸುತ್ತಿದೆ.

ಇಂಥ ವಿಷಮ ಪರಿಸ್ಥಿತಿಯಲ್ಲಿ, ಎಲ್ಲ ಪ್ರಗತಿಪರ ಶಕ್ತಿಗಳು, ಪ್ರಜಾಪ್ರಭುತ್ವವಾದಿ ಪಕ್ಷಗಳು, ಸಾಮಾನ್ಯವಾಗಿ ಒಪ್ಪಿಗೆಯಿರುವ ಧೋರಣೆ ಮತ್ತು ಕಾರ್ಯಕ್ರಮಗಳ ಆಧಾರದಲ್ಲಿ ಒಗ್ಗೂಡುವುದು ತುಂಬ ತುರ್ತಿನದಾಗಿದೆ. ಈ ಶಕ್ತಿಗಳನ್ನು ಬೆಳೆಸಿ ಪರ್ಯಾಯ ಶಕ್ತಿಯಾಗಿ ರೂಪಿಸುವಂತೆ ಕ್ರಮಕೈಗೊಳ್ಳಬೇಕಾಗಿದೆ. ಈ ದಿಸೆಯಲ್ಲಿ ರಾಷ್ಟ್ರಮಟ್ಟದಲ್ಲಿ ಜರುಗಿದ ಆರು ಪಕ್ಷಗಳ ಸಮಾವೇಶದ ತೀರ್ಮಾನದ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಎಲ್ಲ ಪ್ರಗತಿಪರ ಶಕ್ತಿಗಳು ಒಗ್ಗೂಡಿ "ಕರ್ನಾಟಕ ಜನತಂತ್ರ ರಂಗ" ವನ್ನು ರೂಪಿಸಲು ಮುಂದಾಗಿವೆ.

ಡಿಸೆಂಬರ್ 26ರಂದು ಪ್ರಾರಂಭವಾಗಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಸಾರ್ವತ್ರಿಕ ಮುಷ್ಕರಕ್ಕೆ ಈ ಸಭೆ ತನ್ನ ಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಕಾರ್ಮಿಕರು ಮತ್ತು ಆಡಳಿತವರ್ಗಗಳು ಸೇರಿ ಸಂಯುಕ್ತವಾಗಿ ರೂಪಿಸಿದ ಒಪ್ಪಂದದ ಅನುಷ್ಠಾನಕ್ಕೆ ಕಾರ್ಮಿಕರು ಒತ್ತಾಯಿಸುತ್ತಿದ್ದಾರೆ. ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಉಗ್ರವಾಗಿ ಖಂಡಿಸುತ್ತ ಕಾರ್ಮಿಕರ ಮುಷ್ಕರಕ್ಕೆ ಯಶಸ್ಸು ದೊರೆಯಲೆಂದು ಸಭೆ ಹಾರೈಸಿತು.

ರೈತಹೋರಾಟದ ಹಿನ್ನೆಲೆಯಲ್ಲಿ ರೈತರ ಮತ್ತು ಕೃಷಿಕೂಲಿಕಾರರ ಪರಿಸ್ಥಿತಿಯನ್ನೂ, ಅವರ ಬೇಡಿಕೆಗಳನ್ನೂ ಅವಲೋಕಿಸಲಾಯಿತು. ಕೃಷಿಗೆ ಅತ್ಯಾಗತ್ಯವಾಗಿರುವ ರಾಸಾಯನಿಕ ಗೊಬ್ಬರ, ಔಷಧಿ ಇತ್ಯಾದಿಗಳ ಬೆಲೆಗಳು ವಿಪರೀತವಾಗಿ ಏರಿವೆ. ಮೇಲಿಂದ ಮೇಲೆ ಪ್ರಕೃತಿ ವಿಕೋಪದಿಂದಾಗಿ ಬರಗಾಲ-ಪ್ರವಾಹ ಇತ್ಯಾದಿಗಳಿಂದ ರೈತವರ್ಗ ಕಂಗೆಟ್ಟಿದೆ. ಮಧ್ಯವರ್ತಿದಾರರ ಕೈಯಲ್ಲಿ ನರಳುತ್ತಿರುವ ರೈತರು ಕಡಿಮೆ ಬೆಲೆಗಳಿಗೆ ತಮ್ಮ ಉತ್ಪಾದನೆಗಳನ್ನು ಮಾರಬೇಕಾಗಿರುವ ಅಸಹನೀಯ ಪರಿಸ್ಥಿತಿ ಇದೆ. ಭ್ರಷ್ಟಾಚಾರದಲ್ಲಿ ಮುಳುಗಿರುವ ಅಧಿಕಾರಿಗಳು ತಮ್ಮ ಮನಬಂದಂತೆ ರೈತನನ್ನು ಶೋಷಿಸುತ್ತಿದ್ದಾರೆ. ರೋಗಗ್ರಸ್ತ ಮತ್ತು ದೋಷಪೂರಿತ ಸಾಲಪದ್ಧತಿಯಿಂದಾಗಿ ಬಹುಸಂಖ್ಯಾತ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಪ್ರಯೋಜನವಾಗುವುದರ ಬದಲು ಅವರು, ಇತರೇ ಸಾಲದಿಂದ ದಿವಾಳಿಯಾಗಿದ್ದಾರೆ.

ತನ್ನ ಶೋಷಣೆಯ ವಿರುದ್ಧ ನರಗುಂದ, ನವಲಗುಂದ ವಿಭಾಗದಲ್ಲಿ ಬಂಡೆದ್ದ ರೈತ ಸಮುದಾಯವನ್ನು ರಾಜ್ಯ ಸರಕಾರ ಅಮಾನುಷವಾಗಿ ಹತ್ತಿಕ್ಕಿರುವದಲ್ಲದೇ, ಪೋಲೀಸರನ್ನು ಉಪಯೋಗಿಸಿ ನಿರಪರಾಧಿ ರೈತರ ಕೊಲೆಗೆ ಕಾರಣವಾಗಿದೆ. ವಿರೋಧಿ ಪಕ್ಷಗಳ ಸಂಯುಕ್ತ ಪ್ರಯತ್ನಗಳಿಂದ ಸರಕಾರವನ್ನು ಸ್ವಲ್ಪ ಮಟ್ಟಿಗೆ ರೈತ ವಿರೋಧಿ ನಿಲುವಿನಿಂದ ದೂರ ಸರಿಸಿದಂತಾಗಿದೆ. ನರಗುಂದ, ನವಲಗುಂದಗಳಲ್ಲಷ್ಟೇ ಅಲ್ಲದೇ ರಾಜ್ಯದ ವಿವಿಡೆಡೆ ಸಹ ರೈತಹೋರಾಟ ವಿಸ್ತರಿಸಿದೆ. ಸಾಮಾನ್ಯವಾದ ಮತ್ತು ಸ್ಥಳೀಯ ಬೇಡಿಕೆಗಳನ್ನು ಸರಕಾರದ ಮುಂದಿಡಲಾಗಿದೆ. ಮುಖ್ಯಮಂತ್ರಿ ಘೋಷಿಸಿದ ಕೆಲವು ಸೌಲಭ್ಯಗಳು ಇನ್ನೂ ಕಾಗದದ ಮೇಲಿವೆ. ಕೇವಲ ಹೋರಾಟವನ್ನು ನಿಲ್ಲಿಸುವಂತೆ ಮಾಡಲು ಮುಖ್ಯಮಂತ್ರಿ ಕೆಲವು ಕಾರ್ಯರೂಪಕ್ಕೆ ಬರದ ರಿಯಾಯತಿ ಘೋಷಿಸಿರುವುದು ಸ್ಪಷ್ಟವಾಗಿದೆ.

"ಬಂಗಾರಪ್ಪ ಸಮಿತಿ" ಮತ್ತು "ಬೊಮ್ಮಾಯಿ ಕಮಿಟಿ" ಗಳನ್ನು ರದ್ದುಪಡಿಸಿರುವುದಂತೂ ಅಸಭ್ಯಕ್ರಮವಾಗಿದೆಯಲ್ಲದೆ ಸರಕಾರದ ಕುತಂತ್ರಕ್ಕೆ ಸ್ಪಷ್ಟ ನಿದರ್ಶನ. ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ನೀಡಿ, ಸರಿಯಾದ ಸಾಲಸೌಲಭ್ಯ ಇವುಗಳ ಕಡೆಗೆ ಗಮನವನ್ನೇ ಹರಿಸಿಲ್ಲ.

ಈ ದಿಸೆಯಲ್ಲಿ ಈಗಾಗಲೇ ಪ್ರಾರಂಭವಾಗಿರುವ ರೈತ ಹೋರಾಟವನ್ನು ಇನ್ನೂ ಹೆಚ್ಚಿಗೆ ಸಂಘಟಿಸಿ ಬಲಿಷ್ಟಗೊಳಿಸುವುದು ತುಂಬ ಅವಶ್ಯವಿದೆ. ಕಾರಣ "ಕರ್ನಾಟಕ ಪ್ರಗತಿಪರ ಜನತಂತ್ರ ರಂಗದ" ನೇತೃತ್ವದಲ್ಲಿ ರೈತ-ಕಾರ್ಮಿಕರ ಹೋರಾಟ ಸಮಿತಿಯನ್ನು ರೂಪಿಸಿ ರೈತರ, ಕೃಷಿಕೂಲಿಗಾರರ ನ್ಯಾಯಬದ್ಧ ಬೇಡಿಕೆಗಳಿಗಾಗಿ ಹೊಸದೃಷ್ಟಿಕೋನದಲ್ಲಿ ಹೋರಾಡಲು ನಿಶ್ಚಯಿಸಲಾಗಿದೆ. ಈಗಾಗಲೇ ಬೆಳೆದು ಬಂದಿರುವ ಹೋರಾಟಕ್ಕೆ ಸ್ಪಷ್ಟ ಮತ್ತು ನಿರ್ದಿಷ್ಟ ರಾಜಕೀಯ ತಿರುವನ್ನು ನೀಡಲು ಎಡ ಪ್ರಜಾಪ್ರಭುತ್ವ ಶಕ್ತಿಗಳು ಮುಂದಾಗಲು ಕರೆಯೀಯಲಾಗಿದೆ.

ಈ ದಿಸೆಯಲ್ಲಿ ಪ್ರಥಮ ಹೆಜ್ಜೆಯಾಗಿ ಜನವರಿ 16 ರಿಂದ ನರಗುಂದದಿಂದ ಪ್ರಾರಂಭಿಸಿ, ರಾಜ್ಯದ ಎಲ್ಲ ಭಾಗಗಳ ರೈತರ ಬೃಹತ್ ಜಾಥಾ ಸಂಘಟಿಸಲು ನಿರ್ಧಾರ ಮಾಡಲಾಗಿದೆ. ಅದರೊಟ್ಟಿಗೇ ಹುತಾತ್ಮ ಜ್ಯೋತಿಯನ್ನು (ಹೋರಾಟದಲ್ಲಿ ಮಡಿದವರ ಸ್ಮರಣಾರ್ಥವಾಗಿ) ತರಲು ನಿರ್ಧರಿಸಲಾಗಿದೆ ○

....ಮಣ್ಣಿನ ಮಕ್ಕಳ ಬೃಹತ್ ಜಾಥಾ

(1ನೇ ಪುಟದಿಂದ)

3. ಸಣ್ಣ ರೈತರ ಸಾಲ ರದ್ದತಿ, ಉಳಿದವರ ಸಾಲ-ವಸೂಲಿ ಸ್ವಲ್ಪ ಕಾಲ ತಡೆಹಿಡಿಯುವುದು.

4. ಬರಗಾಲ ಪೀಡಿತ ಪ್ರದೇಶದಲ್ಲಿ ಬರಗಾಲ ಕಾಮಗಾರಿಗಳನ್ನು ತಕ್ಷಣವೇ ಪ್ರಾರಂಭಿಸುವದು.

5. ಕೃಷಿಕೂಲಿಕಾರರಿಗೆ ದಿನಗೂಲಿ 10ರೂ. ನಿಗದಿ ಮಾಡುವದು.

6. ಬೆಲೆ ಏರಿಕೆ ತಡೆಗಟ್ಟಲು ಜೀವನಾವಶ್ಯಕ ವಸ್ತುಗಳ ಸಗಟು ವ್ಯಾಪಾರವನ್ನು ಸರಕಾರ ವಹಿಸುವುದು: ಸಾರ್ವಜನಿಕ ವಿತರಣಾ ವ್ಯವಸ್ಥೆ ಮೂಲಕ ಹಳ್ಳಿ ಮತ್ತು ಪಟ್ಟಣಗಳೂ ಸೇರಿದಂತೆ ಎಲ್ಲ ಜನತೆಗೆ ಜೀವನಾವಶ್ಯಕ ವಸ್ತುಗಳನ್ನು ಕಡಿಮೆ ಮತ್ತು ನಿಗದಿ ದರದಲ್ಲಿ ಒದಗಿಸುವುದು.

7. ಭೂರಹಿತರಿಗೆ ಈ ಭೂಮಿ ಹಂಚುವದು; ಈಗಾಗಲೇ ಸ್ವಾಧೀನವಿರುವ ಸರ್ಕಾರಿ ಭೂಮಿಯನ್ನು ಖಾಯಂಗೊಳಿಸುವುದು ಇತ್ಯಾದಿ ಹನ್ನೆರಡು ಬೇಡಿಕೆಗಳು.

ಕರ್ನಾಟಕದ ಇತಿಹಾಸದಲ್ಲೇ ಚಾರಿತ್ರಿಕವಾಗಬಹುದಾದ ಈ ಜಾಥಾಕ್ಕೆ ಎಲ್ಲ ಪ್ರಗತಿಪರ ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳು ಬೆಂಬಲ ನೀಡಬೇಕು. ●

ಐಕ್ಯತೆಯನ್ನು ಕಾಯ್ದುಕೊಳ್ಳಿ

ಪಿ. ರಾಮಮೂರ್ತಿ

ಡಿಸೆಂಬರ್ 26ರಿಂದ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಪ್ರಾರಂಭವಾಗಿದೆ ಸೌಹಾರ್ದ ಬೆಂಬಲ ಕೊಡಲು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ವ್ಯವಸ್ಥೆಗೊಳಿಸಿದ್ದ ಸಭೆಯನ್ನು ಉದ್ದೇಶಿಸಿ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಮೂರ್ತಿಯವರು ಮಾತನಾಡುತ್ತಾ ಸಿ.ಐ.ಟಿ.ಯು. ಪರವಾಗಿ ಕಾರ್ಮಿಕರ ಹೋರಾಟಕ್ಕೆ ಯಶಕೋರಿದರು.

ಬಿ.ಎಚ್.ಇ.ಎಲ್. ಒಪ್ಪಂದದ ಹಿನ್ನೆಲೆಯನ್ನು ಎಳೆಎಳೆಯಾಗಿ ವಿವರಿಸಿದ ಕಾಂ. ರಾಮಮೂರ್ತಿಯವರು ಕೇಂದ್ರ ಸರಕಾರ ಈ ಬಗ್ಗೆ ತಳೆದಿರುವ ನಿಲುವನ್ನು ಉಗ್ರವಾಗಿ ಖಂಡಿಸಿದರು. 1978ರಲ್ಲಿ ಒಪ್ಪಂದದಲ್ಲಿ ಸೇರಿಸಲ್ಪಟ್ಟಿರುವ ಒಂದಂಶ (ಬೇರೆ ಪಬ್ಲಿಕ್ ಸೆಕ್ಟರ್‌ನಲ್ಲಿ ವೇತನ ಹೆಚ್ಚಳವಾದರೆ ಇಲ್ಲಿಯೂ ಅದನ್ನೇ ಅನ್ವಯಿಸಲಾಗುವುದು.)ದ ಅನುಷ್ಠಾನಕ್ಕೆ ಕಾರ್ಮಿಕರು ಒತ್ತಾಯಿಸುತ್ತಿರುವುದು. ದಿನಾಂಕ 6-1-81ರಂದ ಬೆಂಗಳೂರಿನಲ್ಲಿ ಕೇಂದ್ರ ಮಂತ್ರಿ ಸ್ಟೀಫನ್‌ರ ಪ್ರತಿಕ್ರಿಯೆಯನ್ನು ಖಂಡಿಸಿದ ಪಿ.ಆರ್. ಬಿ.ಎಚ್.ಇ.ಎಲ್. ಒಪ್ಪಂದ "ಇಂದಿರಾ ನೇತೃತ್ವದ ಕೇಂದ್ರ ಸರಕಾರದೊಡನೇ ಆಗಿದ್ದು. ಈಗ ಸ್ಟೀಫನ್ ಮಹಾಶಯ ಆ ಒಪ್ಪಂದ ಅಪಾಯಕಾರಿ ಎಂದು ಹೇಳುತ್ತಿದ್ದಾರೆ" ಎಂದು ವ್ಯಂಗವಾಗಿ ಟೀಕಿಸಿದರು.

1978ರ ಮೇನಲ್ಲಿ ನಡೆದ ಒಪ್ಪಂದ (ಬೆಂಗಳೂರಲ್ಲಿ)ವನ್ನು ಪ್ರಸ್ತಾಪಿಸುತ್ತಾ ಕಾಂ. ಪಿ ಆರ್. ಈ ಒಪ್ಪಂದವನ್ನು ತಾತ್ಕಾಲೀನವಾಗಿ ಮಾಡಿಕೊಂಡರೆ ಒಳಿತು ಎಂದು ತಾವು ಹಿಂದೆಯೇ ತಿಳಿಸಿದ್ದನ್ನು ಜ್ಞಾಪಿಸಿಕೊಂಡರು.

ಎನ್.ಎಸ್.ಓ. ಉಪಯೋಗಿಸಿ ಮುಷ್ಕರ ಮುರಿಯಲು ಪ್ರಯತ್ನಿಸಿದ್ದನ್ನು ಅತ್ಯುಗ್ರವಾಗಿ ಖಂಡಿಸಿದ ಪಿ ಆರ್. ಈ ರೀತಿ ಮಾಡಿದಲ್ಲಿ ವಿಪರೀತ ಪರಿಣಾಮ ಎದುರಿಸಬೇಕಾದೀತೆಂದು ಕೇಂದ್ರ ಸರಕಾರವನ್ನು ಎಚ್ಚರಿಸಿದರು.

ಜನಸಮುದಾಯದ ಹೋರಾಟಗಳ ಮುಂಚೂಣಿಯಲ್ಲಿರುವವರನ್ನು ಎನ್.ಎಸ್.ಓ. ಮೂಲಕ ಬಂಧಿಸುವ ಬೆದರಿಕೆ ಹಾಕುವದನ್ನು ಬಿಟ್ಟು, ಅಪಾರ ಕಪ್ಪು ಹಣ ಸೃಷ್ಟಿಸಿ ಜನತೆಯನ್ನು ಹಾಡೇ ಹಗಲು ದೋಚುತ್ತಿರುವ ಟಾಟಾ, ಬಿರ್ಲಾ ಇತ್ಯಾದಿ ಬಂಡವಾಳಗಾರರನ್ನು ಬಂಧಿಸಲಿ ಎಂದು ಗುಡುಗಿದರು.

ಐಕ್ಯವನ್ನು ಕಾಯ್ದುಕೊಂಡು ಜನವಿರೋಧಿ, ಕಾರ್ಮಿಕ ವಿರೋಧಿ ಇಂದಿರಾ ಸರಕಾರಕ್ಕೆ ತಕ್ಕ ಶಾಸ್ತಿ ಮಾಡಬೇಕೆಂದು ಕರೆಕೊಟ್ಟ ಕಾಂ. ಪಿ ಆರ್. ಈ ಹೋರಾಟಕ್ಕೆ ಸಿ.ಐ.ಟಿ.ಯು ವಿನ ಸರ್ವಬೆಂಬಲವನ್ನು ಸೂಚಿಸಿದರು.

●

ಬೆಂಗಳೂರಿನಲ್ಲಿ ಮಹಿಳೆಯರಿಂದ ಬೆಲೆ ಏರಿಕೆಗೆ ಪ್ರತಿಭಟನ

"ಮಹಿಳೆಯರೇ ಒಂದಾಗಿ, ಹೋರಾಟಕ್ಕೆ ಮುಂದಾಗಿ"

ದೈನಂದಿನ ಅಗತ್ಯವಸ್ತುಗಳು ಜನಸಾಮಾನ್ಯರ ಕೈಗೆಟುಕದಷ್ಟು ಏರಿವೆ. ಇದರ ಬಿಸಿ ನಿಚ್ಚಳವಾಗಿ ತಗಲುವುದು ಗೃಹಿಣಿಯರಿಗೇ. ಆದ್ದರಿಂದ ಸರ್ಕಾರದ ಶೋಷಣೆಗೆ, ಮಹಿಳೆಯರು ಬೆಂಗಳೂರಿನಲ್ಲಿ ಅಪೂರ್ವವಾದ ಮೆರವಣಿಗೆಯ ಮೂಲಕ ಜನವರಿ 6ರಂದು ಪ್ರತಿಭಟನೆ ವ್ಯಕ್ತಪಡಿಸಿದರು. ಬೆಂಗಳೂರಿನ ಜನಸಂಖ್ಯೆಗೆ ಹೋಲಿಸಿದರೆ ಮೆರವಣಿಗೆಯಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಎನ್ನಿಸಿದರೂ ಆರ್ಥಿಕ ಫಲಕಗಳು, ಘೋಷಣೆಗಳ ಮೂಲಕ ಅದು ಜನರ ಕಣ್ಸೆಳೆಯಿತು. ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಮಹಿಳಾ ಸಂಘರ್ಷ ವೇದಿಕೆ, ವಿಮೋಚನಾ ಮತ್ತು ಕರ್ನಾಟಕ ಮಹಿಳಾ ಸಂಘಗಳು ಸೇರಿ ರಚಿಸಿಕೊಂಡಿರುವ "ಮಹಿಳಾ ಕ್ರಿಯಾಸಮಿತಿ" ಇದನ್ನು ಏರ್ಪಡಿಸಿತ್ತು. ಬೀಡಿ ಕಾರ್ಮಿಕರು, ಎಲ್.ಐ.ಸಿ, ಬ್ಯಾಂಕ್ ಉದ್ಯೋಗಿಗಳು, ವಿದ್ಯಾರ್ಥಿನಿಯರು, ಗೃಹಿಣಿಯರು, ಅಧ್ಯಾಪಕರು ಇದರಲ್ಲಿ ಭಾಗವಹಿಸಿ, "ಗುಂಡಪ್ಪ ಗುಂಡಪ್ಪ ಸೀಮೆ ಎಣ್ಣೆ ಎಲ್ಲಪ್ಪ" "ಬೇಕು ಬೇಕು ಸಕ್ಕರೆ ಬೇಕು" "ಹುಬ್ಬಳ್ಳಿ ಮಹಿಳೆಯರ ಮೆರವಣಿಗೆ ಮೇಲಿನ ಲಾಠಿ ಚಾರ್ಜಿಗೆ ಧಿಕ್ಕಾರ" "ಬಿ ಟಿ ಎಸ್ ಬಸ್‌ದರ ಇಳಿಸಲಿ" "ಮಹಿಳೆಯರೇ ಒಂದಾಗಿ ಹೋರಾಟಕ್ಕೆ ಮುಂದಾಗಿ" "ಹೋರಾಟ ಹೋರಾಟ ಜಯಸಿಗೋವರೆಗೂ ಹೋರಾಟ" ಎಂಬ ಘೋಷಣೆಗಳನ್ನು ಕೂಗಿದರು.

ಮೆರವಣಿಗೆಯ ನಂತರ ಕಬ್ಬನ್ ಪಾರ್ಕಿನಲ್ಲಿ ಬಹಿರಂಗ ಸಭೆ ನಡೆಯಿತು. ವಿವಿಧ ಸಂಘಟನೆಗಳ ಪ್ರತಿನಿಧಿಗಳು ಅಲ್ಲಿ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ವಿಧಾನಸೌಧದ ಸುತ್ತ ನಿಷೇಧಾಜ್ಞೆ ಇದ್ದುದರಿಂದ ಮೆರವಣಿಗೆ ತೀರ ಬಳಸು ಹಾದಿಯಲ್ಲಿ ಬರಬೇಕಾಯಿತು. ರಾಜ್ಯಪಾಲರು ರಾಜಭವನದಲ್ಲಿ ಇದ್ದರೋ ಇರಲಿಲ್ಲವೋ ಸರಿಯಾಗಿ ತಿಳಿಯದೆ, ಅವರ ಆಪ್ತ ಕಾರ್ಯದರ್ಶಿ ಮನವಿಯನ್ನು ಸ್ವೀಕರಿಸುವಂತಾಯಿತು. ಮಹಿಳಾ ಪೋಲೀಸರು, ಮಹಿಳಾ ಸಬ್‌ಇನ್ಸ್‌ಪೆಕ್ಟರ್‌ಗಳು ಅಧಿಕ ಸಂಖ್ಯೆಯಲ್ಲಿ ಇದ್ದು ಮೆರವಣಿಗೆ ಯುದ್ದಕ್ಕೂ ಜೊತೆಗೆ ಬರುತ್ತಿದ್ದುದರಿಂದ ಅವರೂ ಈ ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದಾರೇನೋ ಎಂದು ಜನ ಭಾವಿಸುವಂತಾಗಿತ್ತು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT